# ಹಜ್ಜ್ ಮತ್ತು ಉಮ್ರಃದ ವಿವರಣೆ

صفة الحج والعمرة

< الكنادي >

ಅಲ್‌ಮಸ್ಜಿದ್ ಅಲ್ ಹರಾಮ್ ಮತ್ತು ಅಲ್‌ಮಸ್ಜಿದ್ ಅನ್ನಬವೀಯ ವ್ಯವಹಾರಗಳ ಮುಖ್ಯ ಅಧ್ಯಕ್ಷಗಿರಿ

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು

ಪರಿಶೀಲನೆ: ಅಬೂ ಬಕರ್ ನಝೀರ್ ಸಲಫಿ

# صفة الحج والعمرة

الرئاسة العامة لشؤون المسجد الحرام
والمسجد النبوي

ترجمة: محمد حمزة البتوري

مراجعة: أبو بكر نذير السلفي

# ಪ್ರಸ್ತಾವನೆ

ತನ್ನ ಪವಿತ್ರ ಭವನಕ್ಕೆ ಹಜ್ಜ್ ನಿರ್ವಹಿಸುವುದನ್ನು ಧರ್ಮದ ಮೂಲಭೂತ ವಿಷಯಗಳಲ್ಲಿ ಸೇರಿಸಿದ ಅಲ್ಲಾಹನಿಗೆ ಸರ್ವಸ್ತುತಿ. ಅಲ್ಲಾಹು ತನ್ನ ಖಲೀಲ್ ಆಗಿರುವ ಇಬ್ರಾಹೀಮ್(ﷺ)ರೊಂದಿಗೆ,

﴿وَأَذِّن فِي ٱلنَّاسِ بِٱلۡحَجِّ يَأۡتُوكَ رِجَالٗا وَعَلَىٰ كُلِّ ضَامِرٖ يَأۡتِينَ مِن كُلِّ فَجٍّ عَمِيقٖ ٢٧﴾ [الحج: 27].

“ಹಜ್ಜ್‌ನ ಬಗ್ಗೆ ತಾವು ಜನರಿಗೆ ಘೋಷಣೆ ಮಾಡಿರಿ. ಅವರು ಪಾದಚಾರಿಗಳಾಗಿಯೂ, ವಿದೂರವಾದ ಎಲ್ಲ ಪರ್ವತ ಕಣಿವೆಗಳ ಮೂಲಕವೂ, ಎಲ್ಲ ವಿಧದ ಸಣಕಲು ಒಂಟೆಗಳ ಮೇಲೇರಿಯೂ ತಮ್ಮ ಬಳಿಗೆ ಬರುವರು” [ಕುರ್‌ಆನ್ 22:27]

ಎಂದು ಆಜ್ಞಾಪಿಸಿದಾಗ, ಇಬ್ರಾಹೀಮ್(ﷺ)ರವರು ಮಾಡಿದ ಘೋಷಣೆಗೆ ಉತ್ತರವಾಗಿ ಕಅ್‌ಬಾಲಯಕ್ಕೆ ತವಾಫ್ ಮಾಡಲು ಮತ್ತು ಮಕಾಮ್ ಇಬ್ರಾಹೀಮ್‌ನ ಹಿಂದೆ ನಮಾಝ್ ಮಾಡಲು ತನ್ನ ದಾಸರ ಪೈಕಿ ತಾನಿಚ್ಛಿಸಿದವರಿಗೆ ತೌಫೀಕ್ ನೀಡಿದ ಅಲ್ಲಾಹನಿಗೆ ಸರ್ವಸ್ತುತಿ.

ಸೃಷ್ಟಿಗಳಲ್ಲೇ ಅತಿಶ್ರೇಷ್ಠರಾಗಿರುವ, ಸಂದೇಶವಾಹಕರುಗಳ ನಾಯಕರಾಗಿರುವ, ನಮ್ಮ ಪ್ರವಾದಿಯೂ, ನಮ್ಮ ಮಾದರಿಯೂ ಆಗಿರುವ, ಪ್ರಬಲವಾದ ಧರ್ಮದೊಂದಿಗೆ ಮತ್ತು ನೇರವಾದ ಮಾರ್ಗದೊಂದಿಗೆ ಕಳುಹಿಸಲ್ಪಟ್ಟಿರುವ ಮುಹಮ್ಮದ್ ಇಬ್ನ್ ಅಬ್ದುಲ್ಲಾಹ್(ﷺ)ರವರ ಮೇಲೆ ಅಲ್ಲಾಹನ ಸಲಾತ್ ಮತ್ತು ಸಲಾಮ್ ಇರಲಿ.

ಪ್ರವಾದಿ(ﷺ)ರವರು ಹೇಳಿದರು:

« يَا أَيُّهَا النَّاسُ، إِنَّ اللَّهَ قَدْ فَرَضَ عَلَيْكُمْ الْحَجَّ فَحُجُّوا » رواه مسلم

“ಓ ಜನರೇ! ಖಂಡಿತವಾಗಿಯೂ ಅಲ್ಲಾಹು ನಿಮ್ಮ ಮೇಲೆ ಹಜ್ಜ್ ನಿರ್ವಹಿಸುವುದನ್ನು ಕಡ್ಡಾಯಗೊಳಿಸಿದ್ದಾನೆ. ಆದ್ದರಿಂದ ನೀವು ಹಜ್ಜ್ ನಿರ್ವಹಿಸಿರಿ.” [ಮುಸ್ಲಿಮ್]

ಹಜ್ಜನ್ನು ಸಹೀಹಾದ ವಿಧದಲ್ಲಿ ನಿರ್ವಹಿಸಲು ಅವರು ತಮ್ಮ ಸಮುದಾಯಕ್ಕೆ ನಿರ್ದೇಶನಗಳನ್ನು ನೀಡಿದರು. ಅವರು ತಮ್ಮ ಸಹಾಬಾಗಳೊಂದಿಗೆ ಹೇಳಿದರು:

« خُذُوا عَنِّي مَنَاسِكَكُمْ » رواه مسلم

“ನೀವು ನಿಮ್ಮ ಹಜ್ಜ್ ಕರ್ಮಗಳನ್ನು ನನ್ನಿಂದ ಪಡೆದುಕೊಳ್ಳಿರಿ.” [ಮುಸ್ಲಿಮ್]

ತನ್ನನ್ನು ಅನುಕರಣೆ ಮಾಡುವಂತೆ ಮತ್ತು ತನ್ನ ಸುನ್ನತ್ತನ್ನು ಹಿಂಬಾಲಿಸುವಂತೆ ಅವರು ಜನರಿಗೆ ಪ್ರೇರೇಪಿಸಿದರು. ಯಾಕೆಂದರೆ ಒಂದು ಇಬಾದತ್ ಸಹೀಹ್ ಆಗಬೇಕಾದರೆ ಅದು ಅಲ್ಲಾಹನ ಮುಖವನ್ನು ಮಾತ್ರ ಉದ್ದೇಶಿಸಿ ನಿರ್ವಹಿಸಿದ್ದಾಗಿರಬೇಕು ಹಾಗೂ ಪ್ರವಾದಿ(ﷺ)ರವರು ಕಲಿಸಿದ ಸುನ್ನತ್ತಿಗೆ ಹೊಂದಿಕೆಯಾಗಬೇಕು.

ಈ ನಿಟ್ಟಿನಲ್ಲಿ, ಅಲ್ಲಾಹನ ಭವನಕ್ಕೆ ಹಜ್ಜ್ ಮತ್ತು ಉಮ್ರಃ ನಿರ್ವಹಿಸಲು ಬರುವವರಿಗೆ ದಾರಿದೀಪವಾಗಲು ಮತ್ತು ಅವರು ತಮ್ಮ ಇಬಾದತ್‌ಗಳನ್ನು ಕುರ್‌ಆನ್ ಮತ್ತು ಸುನ್ನತ್ತಿಗೆ ಹೊಂದಿಕೆಯಾಗುವಂತೆ ಸಹೀಹಾದ ವಿಧದಲ್ಲಿ ನಿರ್ವಹಿಸುವಂತಾಗಲು ಮತ್ತು ಮುಸ್ಲಿಮನು ತನ್ನ ಧರ್ಮದ ಬಗ್ಗೆ

ಅರಿವುಳ್ಳವನಾಗಲು ಹಾಗೂ ತನ್ನ ಇಬಾದತ್‌ಗಳನ್ನು ಅಸಿಂಧುಗೊಳಿಸುವ ಮತ್ತು ಅಪೂರ್ಣಗೊಳಿಸುವ ವಿಷಯಗಳಿಂದ ದೂರವಿರುವಂತಾಗಲು **ಅಲ್‌ಮಸ್ಜಿದ್ ಅಲ್‌ಹರಾಮ್ ಮತ್ತು ಅಲ್‌ಮಸ್ಜಿದ್ ಅನ್ನಬವೀಯ ವ್ಯವಹಾರಗಳ ಮುಖ್ಯ ಅಧ್ಯಕ್ಷ**ಗಿರಿಯು ಈ ನಿರ್ದೇಶನಗಳನ್ನು ಮತ್ತು ಸೂಚನೆಗಳನ್ನು ಒಂದು ಪುಸ್ತಕ ರೂಪದಲ್ಲಿ ಪ್ರಕಟಿಸಲು ಆಸಕ್ತಿ ವಹಿಸಿತು.

ಈ ನಿರ್ದೇಶನಗಳು ನಮ್ಮ ಸಹೋದರರಿಗೆ ಪ್ರಯೋಜನ ಪಡುವಂತಾಗಲು, ಅಲ್ಲಾಹು ನಮಗೂ ಅವರಿಗೂ ಧರ್ಮದ ವಿಷಯಗಳಲ್ಲಿ ಜ್ಞಾನವನ್ನು ಮತ್ತು ಮಾತು ಹಾಗೂ ಕರ್ಮಗಳಲ್ಲಿ ನಿಷ್ಕಳಂಕತೆಯನ್ನು ದಯಪಾಲಿಸಲು ಹಾಗೂ ನಮ್ಮ ಎಲ್ಲ ಸತ್ಕರ್ಮಗಳನ್ನೂ ಸ್ವೀಕರಿಸಲು, ಈ ವಿನಮ್ರ ಪರಿಶ್ರಮವನ್ನು ನಿಮ್ಮ ಮುಂದೆ ಸಮರ್ಪಿಸುತ್ತಿರುವ ಈ ಸಂದರ್ಭದಲ್ಲಿ ನಾವು ಅಲ್ಲಾಹನೊಂದಿಗೆ ಬೇಡುತ್ತೇವೆ. ಖಂಡಿತವಾಗಿಯೂ ಅವನು ಅತ್ಯುತ್ತಮ ರಕ್ಷಕನೂ ಅತ್ಯುತ್ತಮ ಸಹಾಯಕನೂ ಆಗಿದ್ದಾನೆ. ಅಲ್ಲಾಹು ನಮ್ಮ ಪ್ರವಾದಿ ಮುಹಮ್ಮದ್(ﷺ)ರವರ ಮೇಲೆ, ಅವರ ಕುಟುಂಬದ ಮೇಲೆ ಮತ್ತು ಅವರ ಸಹಾಬಾಗಳ ಮೇಲೆ ಸಲಾತ್ ಮತ್ತು ಸಲಾಮ್‌ಗಳನ್ನು ವರ್ಷಿಸಲಿ.

## ಹಜ್ಜ್ ಮತ್ತು ಉಮ್ರಃದ ಶ್ರೇಷ್ಠತೆಗಳು

ಹಜ್ಜ್ ಮತ್ತು ಉಮ್ರಃ ಪಾಪಗಳನ್ನು ಮತ್ತು ದೋಷಗಳನ್ನು ಅಳಿಸಿಹಾಕುವ ಹಾಗೂ ಅಲ್ಲಾಹನ ಸಂತೃಪ್ತಿ ಮತ್ತು ಸ್ವರ್ಗವನ್ನು ಗಳಿಸಿಕೊಡುವ ಅತಿಶ್ರೇಷ್ಠವಾದ ಸತ್ಕರ್ಮವಾಗಿದೆ. ಯಾರಾದರೂ ಅಶ್ಲೀಲ ಕೃತ್ಯವನ್ನೋ ದುಷ್ಕೃತ್ಯವನ್ನೋ ಮಾಡದೆ ಹಜ್ಜ್ ನಿರ್ವಹಿಸಿದರೆ, ಅವನ ತಾಯಿ ಅವನಿಗೆ ಜನ್ಮ ನೀಡಿದ ದಿನದಂತೆ ಅವನು ಹಜ್ಜ್‌ನಿಂದ

ಮರಳಿಬರುವನು. ಅತಿಶ್ರೇಷ್ಠವಾದ ಸತ್ಕರ್ಮದ ಬಗ್ಗೆ ಪ್ರವಾದಿ(ﷺ)ರವರೊಂದಿಗೆ ಕೇಳಲಾದಾಗ ಅವರು ಹೇಳಿದರು:

« إِيمَانٌ بِاللَّهِ وَرَسُولِهِ »

"ಅಲ್ಲಾಹು ಮತ್ತು ಅವನ ರಸೂಲರಲ್ಲಿ ವಿಶ್ವಾಸವಿಡುವುದು." ನಂತರ ಯಾವುದೆಂದು ಕೇಳಲಾದಾಗ ಅವರು ಹೇಳಿದರು:

« الْجِهَادُ فِي سَبِيلِ اللَّهِ »

"ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡುವುದು." ನಂತರ ಯಾವುದೆಂದು ಕೇಳಲಾದಾಗ ಅವರು ಹೇಳಿದರು:

« حَجٌّ مَبْرُورٌ » متفق عليه

"ಮಬ್ರೂರ್ ಆಗಿರುವ ಹಜ್ಜ್." [ಅಲ್‌ಬುಖಾರಿ ಮತ್ತು ಮುಸ್ಲಿಮ್]

ಪ್ರವಾದಿ(ﷺ)ರವರು ಹೇಳಿದರು:

« الْعُمْرَةُ إِلَى الْعُمْرَةِ كَفَّارَةٌ لِمَا بَيْنَهُمَا، وَالْحَجُّ الْمَبْرُورُ لَيْسَ لَهُ جَزَاءٌ إِلَّا الْجَنَّةُ » رواه مسلم

"ಒಂದು ಉಮ್ರಃ ನಿರ್ವಹಿಸಿ ನಂತರ ಇನ್ನೊಂದು ಉಮ್ರಃ ನಿರ್ವಹಿಸಿದರೆ ಅದು ಅದರ ನಡುವಿನ ಪಾಪಗಳನ್ನು ಅಳಿಸಿಹಾಕುತ್ತದೆ. ಮಬ್ರೂರ್ ಆಗಿರುವ ಹಜ್ಜ್‌ಗೆ ಸ್ವರ್ಗದ ಹೊರತು ಬೇರೆ ಪ್ರತಿಫಲವಿಲ್ಲ." [ಮುಸ್ಲಿಮ್]

ಪ್ರವಾದಿ(ﷺ)ರವರು ಹೇಳಿದರು:

« عُمْرَةٌ فِي رَمَضَانَ تَعْدِلُ حَجَّةً مَعِي » متفق عليه

"ರಮದಾನ್ ತಿಂಗಳಲ್ಲಿ ನಿರ್ವಹಿಸುವ ಉಮ್ರಃ ನನ್ನೊಂದಿಗೆ ಹಜ್ಜ್ ನಿರ್ವಹಿಸಿದ್ದಕ್ಕೆ ಸಮ." [ಅಲ್‌ಬುಖಾರಿ ಮತ್ತು ಮುಸ್ಲಿಮ್]

ಆಯಿಶಾ(ರ)ರವರು ಕೇಳಿದರು: "ಓ ಅಲ್ಲಾಹನ ರಸೂಲರೇ! ಜಿಹಾದನ್ನು ಅತಿಶ್ರೇಷ್ಠವಾದ ಸತ್ಕರ್ಮವಾಗಿ ನಾವು ಕಾಣುತ್ತೇವೆ. ಹಾಗಾದರೆ ನಾವು ಜಿಹಾದ್ ಮಾಡಬಾರದೇ?" ಪ್ರವಾದಿ(ﷺ)ರವರು ಹೇಳಿದರು:

« لَا، لَكِنْ أَفْضَلُ الْجِهَادِ حَجٌّ مَبْرُورٌ » رواه البخاري

"ಅಲ್ಲ, ಆದರೆ ಮಬ್ರೂರ್ ಆಗಿರುವ ಹಜ್ಜ್ ಅತಿಶ್ರೇಷ್ಠ ಜಿಹಾದ್ ಆಗಿದೆ." [ಅಲ್‌ಬುಖಾರಿ]

ಇದೊಂದು ಮಹಾ ಶ್ರೇಷ್ಠತೆಯೂ, ಮಹೋನ್ನತ ಪ್ರತಿಫಲವೂ ಆಗಿದೆ. ಪವಿತ್ರ ಭವನಕ್ಕೆ ಆಗಮಿಸುವ ತನ್ನ ವಿಶ್ವಾಸಿ ದಾಸರಿಗೆ ಅಲ್ಲಾಹು ತೋರಿಸುವ ಔದಾರ್ಯವಾಗಿದೆ. ಅರಫಾತಿನ ಮಣ್ಣಿನಲ್ಲಿ ಮಲಕ್‌ಗಳು ಅವರ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡುವರು. ಆಗ ಅಲ್ಲಾಹು ಅವರೊಂದಿಗೆ ಹೇಳುವನು:

« انْظُرُوا إِلَى عِبَادِي أَتَوْنِي شُعْثًا غُبْرًا، أُشْهِدُكُمْ أَنِّي قَدْ غَفَرْتُ لَهُمْ »

رواه البيهقي

“ಕೆದರಿದ ಕೂದಲುಗಳೊಂದಿಗೆ, ಧೂಳು ತುಂಬಿದ ಬಟ್ಟೆಗಳೊಂದಿಗೆ ನನ್ನ ದಾಸರು ನನ್ನ ಬಳಿಗೆ ಬಂದಿರುವುದನ್ನು ನೋಡಿ. ನಾನು ಅವರಿಗೆ ಕ್ಷಮಿಸಿದ್ದೇನೆಂಬುದಕ್ಕೆ ನಾನು ನಿಮ್ಮನ್ನು ಸಾಕ್ಷಿಯನ್ನಾಗಿ ಮಾಡುತ್ತಿದ್ದೇನೆ.” [ಬೈಹಕೀ]

ಪ್ರವಾದಿ(ﷺ)ರವರು ಹೇಳಿದರು:

« مَا مِنْ يَوْمٍ أَكْثَرَ مِنْ أَنْ يُعْتِقَ اللَّهُ فِيهِ عَبْدًا مِنَ النَّارِ مِنْ يَوْمِ عَرَفَةَ »

رواه مسلم

“ಅಲ್ಲಾಹು ತನ್ನ ದಾಸರನ್ನು ನರಕಾಗ್ನಿಯಿಂದ ಅತ್ಯಧಿಕವಾಗಿ ವಿಮುಕ್ತಿಗೊಳಿಸುವ ಬೇರೊಂದು ದಿನವಿಲ್ಲ; ಅರಫಃ ದಿನದ ಹೊರತು.” [ಮುಸ್ಲಿಮ್]

ಆದ್ದರಿಂದ ಅಲ್ಲಾಹನ ಕಾಣಿಕೆಗಳನ್ನು ಸ್ವೀಕರಿಸಲು ಮತ್ತು ಶ್ರೇಷ್ಠ ಸಮಯಗಳನ್ನು ಸದುಪಯೋಗಪಡಿಸಲು ಸಿದ್ಧನಾಗಬೇಕಾದುದು ಮುಸ್ಲಿಮನಿಗೆ ಸಂಬಂಧಿಸಿದಂತೆ ಅತ್ಯಾವಶ್ಯಕವಾಗಿದೆ. ಇದರಿಂದಾಗಿ ಅಲ್ಲಾಹನ ಸಂತೃಪ್ತಿ ಮತ್ತು ಸ್ವರ್ಗವನ್ನು ಪಡೆಯಲು ಹಾಗೂ ಅವನ ಕೋಪದಿಂದ ಮತ್ತು ನರಕಾಗ್ನಿಯಿಂದ ರಕ್ಷಣೆ ಹೊಂದಲು ಸಾಧ್ಯವಾಗುತ್ತದೆ. ಖಂಡಿತವಾಗಿಯೂ ಅಲ್ಲಾಹು ಅತ್ಯುದಾರಿಯೂ ಗೌರವಾನ್ವಿತನೂ ಆಗಿದ್ದಾನೆ.

## ಮೀಕಾತ್‌ಗಳು

ಹಜ್ಜ್ ಮತ್ತು ಉಮ್ರಃಗಳ ಬಗ್ಗೆ ವಿವರಿಸುವುದಕ್ಕೆ ಮೊದಲು, ಹಜ್ಜ್ ಅಥವಾ ಉಮ್ರಃವನ್ನು ನಿರ್ವಹಿಸಲು ಉದ್ದೇಶಿಸುವ ವ್ಯಕ್ತಿ ಎಲ್ಲಿಂದ ಇಹ್ರಾಮ್ ಮಾಡಬೇಕಾದುದು ಕಡ್ಡಾಯವೋ ಆ ಮೀಕಾತ್‌ಗಳ ಬಗ್ಗೆ ಮೊದಲು ಅರಿತುಕೊಳ್ಳೋಣ.

ಈ ಮೀಕಾತ್‌ಗಳು ಎರಡು ವಿಧಗಳಿವೆ:

**1. ಅಲ್‌ಮವಾಕೀತು ಝ್ಝಮಾನಿಯ್ಯಃ (ಸಮಯಕ್ಕೆ ಸಂಬಂಧಿಸಿದ ಮೀಕಾತ್‌ಗಳು):**

ಅತ್ಯುನ್ನತನಾದ ಅಲ್ಲಾಹು ಹೇಳುತ್ತಾನೆ:

﴿ٱلْحَجُّ أَشْهُرٌ مَّعْلُومَٰتٌ﴾ [البقرة: 197] .

“ಹಜ್ಜ್ ಎಂಬುದು ಅರಿಯಲ್ಪಟ್ಟ ತಿಂಗಳುಗಳಾಗಿವೆ.” [ಕುರ್‌ಆನ್ 2:197]

ಶವ್ವಾಲ್, ದುಲ್‌ಕಅ್‌ದಃ ಮತ್ತು ದುಲ್‌ಹಿಜ್ಜಃ ತಿಂಗಳ ಮೊದಲ ಹತ್ತು ದಿನಗಳು ಹಜ್ಜ್‌ನ ತಿಂಗಳುಗಳು. ಆದರೆ ಉಮ್ರಃ ನಿರ್ವಹಿಸುವುದಕ್ಕೆ ನಿರ್ದಿಷ್ಟ ಸಮಯವೆಂಬುದಿಲ್ಲ. ಬದಲಾಗಿ ವರ್ಷದ ಯಾವುದೇ ತಿಂಗಳಲ್ಲೂ ಉಮ್ರಃ ನಿರ್ವಹಿಸುವುದಕ್ಕೆ ಶರೀಅತ್ತಿನಲ್ಲಿ ಅನುಮತಿಯಿದೆ.

**2. ಅಲ್‌ಮವಾಕೀತುಲ್ ಮಕಾನಿಯ್ಯಃ (ಸ್ಥಳಕ್ಕೆ ಸಂಬಂಧಿಸಿದ ಮೀಕಾತ್‌ಗಳು):**

ಹಜ್ಜ್ ಮತ್ತು ಉಮ್ರಃ ನಿರ್ವಹಿಸುವುದಕ್ಕೆ ಸುನ್ನತ್ (ಪ್ರವಾದಿ ಚರ್ಯೆ) ಕೆಲವು ಸ್ಥಳಗಳನ್ನು ನಿಶ್ಚಯಿಸಿದೆ. ಹಜ್ಜ್ ಅಥವಾ ಉಮ್ರಃ ನಿರ್ವಹಿಸಲು

ಉದ್ದೇಶಿಸಿದ ವ್ಯಕ್ತಿ ಇಹ್ರಾಮ್‌ನೊಂದಿಗಲ್ಲದೆ ಈ ಸ್ಥಳಗಳನ್ನು ದಾಟಿಹೋಗಲು ಅನುಮತಿಯಿಲ್ಲ.

ಇವು ಒಟ್ಟು ಐದು ಸ್ಥಳಗಳು:

**1. ದುಲ್‌ಹುಲೈಫಃ (ذو الحليفة):** ಇದನ್ನು ಈಗ 'ಅಬ್ಯಾರ್ ಅಲೀ' ಎಂದು ಕರೆಯಲಾಗುತ್ತದೆ. ಇದು ಮದೀನಾ ನಿವಾಸಿಗಳು ಮತ್ತು ಮದೀನಾದ ಮೂಲಕ ಮಕ್ಕಾಗೆ ಹೋಗುವವರಿಗೆ ಇರುವಂತಹ ಮೀಕಾತ್. ಇದು ಮಕ್ಕಾ ಅಲ್‌ಮುಕರ್ರಮಃದಿಂದ ಸರಿಸುಮಾರು 420 ಕಿ.ಮೀ. ದೂರದಲ್ಲಿದೆ.

**2. ಅಲ್‌ಜುಹ್‌ಫಃ (الجحفة):** ಇದು ರಾಬಿಗ್ ಎಂಬ ಊರಿನ ಬಳಿಯಿರುವ ಒಂದು ಊರು. ಇದು ಶಾಮ್, ಈಜಿಪ್ಟ್ ಮತ್ತು ಮೊರೊಕ್ಕೋ ನಿವಾಸಿಗಳ ಹಾಗೂ ಅವುಗಳ ಮೂಲಕ ಮಕ್ಕಾಗೆ ಹೋಗುವವರಿಗೆ ಇರುವಂತಹ ಮೀಕಾತ್. ಇದು ಮಕ್ಕಾ ಅಲ್‌ಮುಕರ್ರಮಃದಿಂದ ಸರಿಸುಮಾರು 186 ಕಿ.ಮೀ. ದೂರದಲ್ಲಿದೆ. ಆದರೆ ಜನರು ರಾಬಿಗ್‌ನಿಂದ ಇಹ್ರಾಮ್ ಮಾಡುತ್ತಾರೆ.

**3. ಕರ್ನುಲ್ ಮನಾಝಿಲ್ (قرن المنازل):** ಇದನ್ನು ಅಸ್ಸೈಲುಲ್ ಕಬೀರ್ ಎಂದು ಕರೆಯಲಾಗುತ್ತದೆ. ಇದು ನಜ್ದ್ ಮತ್ತು ತಾಇಫ್ ನಿವಾಸಿಗಳ ಹಾಗೂ ಅವುಗಳ ಮೂಲಕ ಮಕ್ಕಾಗೆ ಹೋಗುವವರಿಗೆ ಇರುವಂತಹ ಮೀಕಾತ್. ಇದು ಮಕ್ಕಾ ಅಲ್‌ಮುಕರ್ರಮಃದಿಂದ ಸರಿಸುಮಾರು 78 ಕಿ.ಮೀ. ದೂರದಲ್ಲಿದೆ. ವಾದೀ ಮುಹರ್ರಮ್ ಇದಕ್ಕೆ ಸಮಾನಾಂತರದಲ್ಲಿದೆ. ಇದು ಅಲ್‌ಹದಾ–ತಾಇಫ್ ರಸ್ತೆಯ ದಿಕ್ಕಿನಿಂದಿರುವ ಕರ್ನುಲ್ ಮನಾಝಿಲ್‌ನ ಎತ್ತರದ ಭಾಗವಾಗಿದೆ. ಇದು ಮಕ್ಕಾ ಅಲ್‌ಮುಕರ್ರಮಃದಿಂದ ಸರಿಸುಮಾರು 75 ಕಿ.ಮೀ. ದೂರದಲ್ಲಿದೆ.

**4. ಯಲಮ್‌ಲಮ್ (يلملم):** ಇದು ಯಮನ್ ನಿವಾಸಿಗಳ ಮತ್ತು ಅದರ ಮೂಲಕ ಮಕ್ಕಾಗೆ ಹೋಗುವವರಿಗೆ ಇರುವಂತಹ ಮೀಕಾತ್. ಇದು ಮಕ್ಕಾ ಅಲ್‌ಮುಕರ್‍ರಮಃದಿಂದ ಸರಿಸುಮಾರು 120 ಕಿ.ಮೀ. ದೂರದಲ್ಲಿದೆ.

**5. ದಾತು ಇರ್ಕ್ (ذات عرق):** ಇದನ್ನು ಅದ್ದುರೈಬಃ ಎಂದು ಕರೆಯಲಾಗುತ್ತದೆ. ಇದು ಇರಾಕ್ ನಿವಾಸಿಗಳ ಮತ್ತು ಅದರ ಮೂಲಕ ಮಕ್ಕಾಗೆ ಬರುವವರಿಗೆ ಇರುವಂತಹ ಮೀಕಾತ್. ಇದು ಮಕ್ಕಾ ಅಲ್‌ಮುಕರ್‍ರಮಃದಿಂದ ಸರಿಸುಮಾರು 100 ಕಿ.ಮೀ. ದೂರದಲ್ಲಿದೆ.

ಯಾರ ಮನೆಯು ಈ ಐದು ಮೀಕಾತ್‌ಗಳ ಒಳಭಾಗದಲ್ಲಿದೆಯೋ ಅವರು ಹಜ್ಜ್ ಮತ್ತು ಉಮ್ರಃಕ್ಕಾಗಿ ತಮ್ಮ ಮನೆಯಿಂದಲೇ ಇಹ್ರಾಮ್ ಮಾಡಬೇಕು. ಆದರೆ ಮಕ್ಕಾದಲ್ಲಿ ವಾಸವಾಗಿರುವವರು ಹರಮ್‌ನಿಂದ ಹೊರ ಹೋಗಿ ಉಮ್ರಃಕ್ಕಾಗಿ ಇಹ್ರಾಮ್ ಮಾಡಬೇಕು. ಆದರೆ ಹಜ್ಜ್‌ಗಾಗಿ ಇಹ್ರಾಮ್ ಮಾಡುವುದಾದರೆ ಮಕ್ಕಾ ನಿವಾಸಿಗಳು ತಮ್ಮ ಮನೆಯಿಂದಲೇ ಮತ್ತು ವಾಸಸ್ಥಳದಿಂದಲೇ ಇಹ್ರಾಮ್ ಮಾಡಬೇಕು.

**ಸೂಚನೆ:**

ಹಜ್ಜ್ ಅಥವಾ ಉಮ್ರಃ ನಿರ್ವಹಿಸುವ ಉದ್ದೇಶದಿಂದ ಆಕಾಶ ಮಾರ್ಗದಿಂದ ಬರುವವರು ಈ ಐದು ಮೀಕಾತ್‌ಗಳಲ್ಲಿ ಯಾವುದಾದರೊಂದರ ಸಮಾನಾಂತರದಲ್ಲಿರುವಾಗ ವಿಮಾನದಲ್ಲೇ ಇಹ್ರಾಮ್ ಮಾಡಬೇಕು. ಜಿದ್ದಃ ವಿಮಾನ ನಿಲ್ದಾಣದಲ್ಲಿ ಇಳಿಯುವ ತನಕ ಇಹ್ರಾಮ್ ಮಾಡುವುದನ್ನು ಮುಂದೂಡಲು ಅವರಿಗೆ ಅನುಮತಿಯಿಲ್ಲ. ಯಾಕೆಂದರೆ ಜಿದ್ದಃವು ಅಲ್ಲಿನ ನಿವಾಸಿಗಳಿಗೆ ಇಹ್ರಾಮ್ ಮಾಡುವುದಕ್ಕಿರುವ ಮೀಕಾತ್ ಆಗಿದೆಯೇ ಹೊರತು ಇತರರಿಗಿರುವ ಮೀಕಾತ್ ಅಲ್ಲ.

ಇಹ್ರಾಮ್ ಮಾಡುವಾಗ ಧರಿಸಬೇಕಾದ ಬಟ್ಟೆಯಿಲ್ಲದವರು ಪ್ಯಾಂಟನ್ನು ಕಳಚದೆ ಅಂಗಿಯನ್ನು ಮಾತ್ರ ಕಳಚಿ, ಅದನ್ನು ತನ್ನ ಹೆಗಲು ಹಾಗೂ ಎದೆಯ ಮೇಲೆ ಹಾಕಿ ಇಹ್ರಾಮ್‌ನ ನಿಯ್ಯತ್ ಮಾಡಬೇಕು. ವಿಮಾನ ನಿಲ್ದಾಣದಲ್ಲಿ ಇಳಿದ ಬಳಿಕ ಇಹ್ರಾಮ್‌ನ ಬಟ್ಟೆಯು ಸಿಕ್ಕಿದರೆ ಪ್ಯಾಂಟನ್ನೂ ಕಳಚಿ ಇಹ್ರಾಮ್‌ನ ಬಟ್ಟೆಯನ್ನು ಧರಿಸಬೇಕು.

ಮಹಿಳೆಯರು ಇಹ್ರಾಮ್‌ಗೆ ಪ್ರತ್ಯೇಕ ಬಟ್ಟೆ ಧರಿಸಬೇಕಾಗಿಲ್ಲ. ಅವರು ತಾವು ಉಟ್ಟ ಬಟ್ಟೆಯಲ್ಲೇ ವಿಮಾನದಲ್ಲಿ ಇಹ್ರಾಮ್ ಮಾಡಬಹುದು. ಆದರೆ ಅವರು ನಿಕಾಬ್ ಧರಿಸಿದ್ದರೆ, ಅಥವಾ ಕೈಕವಚ (ಗ್ಲೌಸ್) ಧರಿಸಿದ್ದರೆ ಅದನ್ನು ಕಳಚಬೇಕು. ತಮ್ಮ ಬಳಿ ಅನ್ಯ ಪುರುಷರಿದ್ದರೆ ಶಾಲು ಮೊದಲಾದವುಗಳ ಮೂಲಕ ಮುಖವನ್ನು ಮುಚ್ಚಿಕೊಳ್ಳಬೇಕು.

## ಹಜ್ಜ್ ಕರ್ಮದ ವಿಧಗಳು

ಹಜ್ಜ್ ಕರ್ಮವು ಮೂರು ವಿಧಗಳಲ್ಲಿವೆ: ಅಲ್‌ಇಫ್ರಾದ್, ಅತ್ತಮತ್ತುಅ್ ಮತ್ತು ಅಲ್‌ಕಿರಾನ್.

**1. ಅಲ್‌ಇಫ್ರಾದ್:**

ಮೀಕಾತ್‌ನಿಂದ ಹಜ್ಜ್‌ಗಾಗಿ ಮಾತ್ರ ಇಹ್ರಾಮ್ ಮಾಡಿ, 'ಲಬ್ಬೈಕ ಹಜ್ಜನ್' ಎಂದು ಹೇಳಬೇಕು. ಮಕ್ಕಾವನ್ನು ತಲುಪಿದೊಡನೆ 'ತವಾಫುಲ್ ಕುದೂಮ್' (ಆಗಮನದ ತವಾಫ್) ನಿರ್ವಹಿಸಬೇಕು. ನಂತರ ಸಫಾ ಮತ್ತು ಮರ್ವಾಗಳ ಮಧ್ಯೆ ಸಅ್‌ಯ್ ನಿರ್ವಹಿಸಬೇಕು. ನಂತರ ತಲೆಗೂದಲು ಬೋಳಿಸುವುದಾಗಲಿ, ಗಿಡ್ಡಗೊಳಿಸುವುದಾಗಲಿ ಮಾಡಬಾರದು. ಇಹ್ರಾಮ್‌ನಿಂದ ಮುಕ್ತರಾಗಲೂ ಬಾರದು. ಬದಲಾಗಿ

ಈದ್ ದಿನದಂದು (ದುಲ್‌ಹಿಜ್ಜಃ 10ರಂದು) ಜಮ್ರತುಲ್ ಅಕಬಃಕ್ಕೆ ಕಲ್ಲೆಸೆಯುವ ತನಕ ಇಹ್ರಾಮ್‌ನಲ್ಲೇ ಉಳಿಯಬೇಕು. ಕಲ್ಲೆಸೆದ ಬಳಿಕ ತಲೆಗೂದಲನ್ನು ಬೋಳಿಸಬೇಕು ಅಥವಾ ಗಿಡ್ಡಗೊಳಿಸಬೇಕು. ಹಜ್ಜ್‌ನ ಸಅ್‌ಯನ್ನು ಹಜ್ಜ್‌ನ ತವಾಫ್ ನಿರ್ವಹಿಸುವ ತನಕ ಮುಂದೂಡಲು ಇವರಿಗೆ ಅನುಮತಿಯಿದೆ.

**2. ಅತ್ತಮತ್ತುಅ್:**

ಹಜ್ಜ್‌ನ ತಿಂಗಳುಗಳಲ್ಲಿ ಉಮ್ರಃಕ್ಕಾಗಿ ಮಾತ್ರ ಇಹ್ರಾಮ್ ಮಾಡಿ, 'ಲಬ್ಬೈಕ ಉಮ್ರತನ್' ಎಂದು ಹೇಳಬೇಕು. ಮಕ್ಕಾವನ್ನು ತಲುಪಿದೊಡನೆ 'ತವಾಫುಲ್ ಕುದೂಮ್' ನಿರ್ವಹಿಸಿ ತರುವಾಯ ಸಅ್‌ಯ್ ನಿರ್ವಹಿಸಬೇಕು. ನಂತರ ತಲೆಗೂದಲನ್ನು ಬೋಳಿಸಬೇಕು ಅಥವಾ ಗಿಡ್ಡಗೊಳಿಸಬೇಕು. ಇದರ ಬಳಿಕ ಇಹ್ರಾಮ್‌ನ ನಿಷಿದ್ಧಗಳೆಲ್ಲವೂ ಧರ್ಮಸಮ್ಮತವಾಗುತ್ತವೆ. ನಂತರ 'ಯೌಮು ತ್ತರ್ವಿಯಃ' (ದುಲ್‌ಹಿಜ್ಜ 8ನೇ ದಿನ)ದಂದು ಹಜ್ಜ್‌ಗಾಗಿ ಇಹ್ರಾಮ್ ಮಾಡಬೇಕು. ನಂತರ ಹಜ್ಜ್ ಕರ್ಮಗಳೆಲ್ಲವನ್ನೂ ನಿರ್ವಹಿಸಬೇಕು. 'ತಮತ್ತುಅ್' ನಿರ್ವಹಿಸುವವರು ಬಲಿದಿನದಂದು ಅಥವಾ 'ಅಯ್ಯಾಮುತ್ತಶ್ರೀಕ್'ನ (ದುಲ್‌ಹಿಜ್ಜಃ 11, 12. 13) ದಿನಗಳಲ್ಲಿ ಬಲಿ ನೀಡಬೇಕು. ಬಲಿಯನ್ನು ನೀಡದವರು ಹಜ್ಜ್‌ನ ದಿನಗಳಲ್ಲಿ ಮೂರು ಉಪವಾಸ ಮತ್ತು ಊರಿಗೆ ಮರಳಿದ ನಂತರ ಏಳು ಉಪವಾಸ, ಹೀಗೆ ಹತ್ತು ದಿನ ಉಪವಾಸ ಆಚರಿಸಬೇಕು.

**3. ಅಲ್‌ಕಿರಾನ್:**

ಉಮ್ರಃ ಮತ್ತು ಹಜ್ಜ್‌ಗಾಗಿ ಒಟ್ಟಿಗೆ ಇಹ್ರಾಮ್ ಮಾಡಿ, 'ಲಬ್ಬೈಕ ಉಮ್ರತನ್ ವಹಜ್ಜನ್' ಎಂದು ಹೇಳಬೇಕು. ಅಥವಾ ಮೊದಲು ಉಮ್ರಃಕ್ಕಾಗಿ ಇಹ್ರಾಮ್ ಮಾಡಿ ತರುವಾಯ ಉಮ್ರಃಕ್ಕಿರುವ ತವಾಫನ್ನು ಆರಂಭಿಸುವುದಕ್ಕೆ ಮೊದಲೇ ಹಜ್ಜ್‌ನಲ್ಲಿ ಪ್ರವೇಶಿಸಬೇಕು. 'ಅಲ್‌ಕಿರಾನ್'

ನಿರ್ವಹಿಸುವವರು ‘ಅಲ್ಇಫ್ರಾದ್’ ನಿರ್ವಹಿಸುವವರು ಮಾಡು ವಂತೆಯೇ ಮಾಡಬೇಕು. ಆದರೆ ‘ಅಲ್‌ಕಿರಾನ್’ ನಿರ್ವಹಿಸುವವರು ಬಲಿ ನೀಡಬೇಕು. ಆದರೆ ‘ಅಲ್ಇಫ್ರಾದ್’ ನಿರ್ವಹಿಸುವವರಿಗೆ ಬಲಿಯಿಲ್ಲ.

## ಹಜ್ಜ್‌ನ ರುಕ್ನ್‌ಗಳು (ಸ್ಥಂಭಗಳು)

ಹಜ್ಜ್ ನಿರ್ವಹಿಸುವುದಕ್ಕೆ ನಾಲ್ಕು ರುಕ್ನ್‌ಗಳಿವೆ.

1. ಹಜ್ಜ್ ಕರ್ಮಕ್ಕೆ ಪ್ರವೇಶಿಸುವುದಾಗಿ ನಿಯ್ಯತ್ ಮಾಡುವುದು. ಅಂದರೆ ಇಹ್ರಾಮ್ ಮಾಡುವುದು.

2. ಅರಫದಲ್ಲಿ ನಿಲ್ಲುವುದು.

3. ‘ತವಾಫುಲ್ ಇಫಾದಃ’ ನಿರ್ವಹಿಸುವುದು.

4. ಸಫಾ ಮತ್ತು ಮರ್ವಾಗಳ ಮಧ್ಯೆ ಸಅ್‌ಯ್ ನಿರ್ವಹಿಸುವುದು.

## ಹಜ್ಜ್‌ನ ವಾಜಿಬ್‌ಗಳು (ಕಡ್ಡಾಯಗಳು)

ಹಜ್ಜ್ ನಿರ್ವಹಿಸುವುದಕ್ಕೆ ಏಳು ವಾಜಿಬ್‌ಗಳಿವೆ.

1. ಮೀಕಾತ್‌ನಿಂದ ಇಹ್ರಾಮ್ ಮಾಡುವುದು.

2. ಅರಫದಲ್ಲಿ ಸೂರ್ಯಾಸ್ತದ ತನಕ ನಿಲ್ಲುವುದು.

3. ಮುಝ್ದಲಿಫಃದಲ್ಲಿ ರಾತ್ರಿ ತಂಗುವುದು.

4. 'ಅಯ್ಯಾಮು ತ್ತಶ್ರೀಕ್'ನ ದಿನಗಳಲ್ಲಿ ಮಿನಾದಲ್ಲಿ ರಾತ್ರಿ ತಂಗುವುದು.

5. ಜಮ್ರಃಗಳಿಗೆ ಕಲ್ಲೆಸೆಯುವುದು.

6. ತಲೆಗೂದಲನ್ನು ಬೋಳಿಸುವುದು ಅಥವಾ ಗಿಡ್ಡಗೊಳಿಸುವುದು.

7. 'ತವಾಫುಲ್ ವಿದಾಅ್' (ವಿದಾಯದ ತವಾಫ್) ನಿರ್ವಹಿಸುವುದು.

**ಸೂಚನೆ:**

ರುಕ್ನ್‌ಗಳ (ಸ್ಥಂಭಗಳ) ಪೈಕಿ ಯಾವುದಾದರೊಂದನ್ನು ನಿರ್ವಹಿಸದಿದ್ದರೆ ಹಜ್ಜ್ ಸಿಂಧುವಾಗುವುದಿಲ್ಲ. ಇನ್ನು ವಾಜಿಬ್‌ಗಳ ಪೈಕಿ ಯಾವುದಾದರೊಂದನ್ನು ನಿರ್ವಹಿಸದಿದ್ದರೆ ಫಿದ್ಯಃ (ಪ್ರಾಯಶ್ಚಿತ್ತ) ನೀಡಬೇಕಾಗಿದೆ. ಫಿದ್ಯಃ (ಪ್ರಾಯಶ್ಚಿತ್ತ)ದ ಮೃಗವನ್ನು ಮಕ್ಕಾದಲ್ಲೇ ಬಲಿ ನೀಡಿ ಅದರ ಮಾಂಸವನ್ನು ಹರಮ್‌ನಲ್ಲಿರುವ ಬಡವರಿಗೆ ಹಂಚಬೇಕು. ಅದರಿಂದ ಏನನ್ನೂ ತಿನ್ನಬಾರದು.

## ಉಮ್ರಃದ ರುಕ್ನ್‌ಗಳು (ಸ್ಥಂಭಗಳು)

ಉಮ್ರಃ ನಿರ್ವಹಿಸುವುದಕ್ಕೆ ಮೂರು ರುಕ್ನ್‌ಗಳಿವೆ.

1. ಉಮ್ರಃದ ಕರ್ಮಗಳಲ್ಲಿ ಪ್ರವೇಶಿಸುವುದಾಗಿ ನಿಯ್ಯತ್ ಮಾಡುವುದು. ಅಂದರೆ ಇಹ್ರಾಮ್ ಮಾಡುವುದು.

2. ಕಅ್‌ಬಾಲಯಕ್ಕೆ ತವಾಫ್ ಮಾಡುವುದು.

3. ಸಫಾ ಮರ್ವಾಗಳ ಮಧ್ಯೆ ಸಅ್‌ಯ್ ಮಾಡುವುದು.

## ಉಮ್ರ಼ದ ವಾಜಿಬ್‌ಗಳು (ಕಡ್ಡಾಯಗಳು)

ಉಮ್ರ಼ ನಿರ್ವಹಿಸುವುದಕ್ಕೆ ಎರಡು ವಾಜಿಬ್‌ಗಳಿವೆ.

1. ಮೀಕಾತ್‌ನಿಂದ ಇಹ್ರಾಮ್ ಮಾಡುವುದು.
2. ತಲೆಗೂದಲನ್ನು ಬೋಳಿಸುವುದು ಅಥವಾ ಗಿಡ್ಡಗೊಳಿಸುವುದು.

## ಇಹ್ರಾಮ್‌ನ ನಿಷಿದ್ಧಗಳು

ಇಹ್ರಾಮ್‌ನ ನಿಷಿದ್ಧಗಳು ಮೂರು ವಿಧಗಳಲ್ಲಿವೆ:

1. ಪುರುಷರು ಮತ್ತು ಮಹಿಳೆಯರಿಗೆ ನಿಷಿದ್ಧವಾಗಿರುವುದು.
2. ಪುರುಷರಿಗೆ ಮಾತ್ರ ನಿಷಿದ್ಧವಾಗಿರುವುದು.
3. ಮಹಿಳೆಯರಿಗೆ ಮಾತ್ರ ನಿಷಿದ್ಧವಾಗಿರುವುದು.

**1. ಪುರುಷರು ಮತ್ತು ಮಹಿಳೆಯರಿಗೆ ನಿಷಿದ್ಧವಾಗಿರುವ ವಿಷಯಗಳು:**

• ಇಹ್ರಾಮ್ ಮಾಡಿದ ಬಳಿಕ ಕೂದಲು ಅಥವಾ ಉಗುರು ಕತ್ತರಿಸುವುದಕ್ಕೆ ಅನುಮತಿಯಿಲ್ಲ. ಆದರೆ ಕೂದಲು ಅಥವಾ ಉಗುರು ಸ್ವತಃ

ಉದುರಿದರೆ ಅದರಲ್ಲಿ ತೊಂದರೆಯಿಲ್ಲ. ಅದಕ್ಕಾಗಿ ಫಿದ್ಯಃ(ಪ್ರಾಯಶ್ಚಿತ್ತ) ನೀಡಬೇಕಾಗಿಲ್ಲ.

• ಇಹ್ರಾಮ್‌ನಲ್ಲಿರುವವರು ಸುಗಂಧದ ಎಲ್ಲ ವಿಧಗಳನ್ನೂ ವರ್ಜಿಸಬೇಕು. ಅದು ದೇಹಕ್ಕೆ ಅಥವಾ ಬಟ್ಟೆಗೆ ಹಾಕುವ ಸುಗಂಧದ್ರವ್ಯ ವಾಗಿದ್ದರೂ ಅಥವಾ ಆಹಾರ ಪಾನೀಯಗಳಿಗೆ ಹಾಕುವ ಸುಗಂಧವಾಗಿದ್ದರೂ ಸರಿ.

• ಕೈಕವಚವನ್ನು (ಗ್ಲೌಸ್) ಧರಿಸುವುದಕ್ಕೆ ಅನುಮತಿಯಿಲ್ಲ.

• ಇಹ್ರಾಮ್‌ನಲ್ಲಿರುವವರು ತಮಗಾಗಿ ಅಥವಾ ಇತರರಿಗಾಗಿ ವಿವಾಹ ಪ್ರಸ್ತಾಪ ಮಾಡುವುದಕ್ಕೆ ಅಥವಾ ವಿವಾಹ ಕರಾರು ಮಾಡುವುದಕ್ಕೆ ಅನುಮತಿಯಿಲ್ಲ.

• ಇಹ್ರಾಮ್‌ನಲ್ಲಿರುವವರಿಗೆ ಸಂಭೋಗ ಅಥವಾ ಅದರೆಡೆಗೆ ಸೆಳೆಯುವ ಕಾರ್ಯಗಳನ್ನು ಮಾಡುವುದು ನಿಷಿದ್ಧವಾಗಿದೆ.

• ಇಹ್ರಾಮ್‌ನಲ್ಲಿರುವ ತನಕ ಭೂ ಪ್ರಾಣಿಗಳನ್ನು ಬೇಟೆಯಾಡಲು ಮುಂದಾಗಬಾರದು. ಅದು ಬೇಟೆ ಮೃಗವನ್ನು ಕೊಲ್ಲುವುದಾಗಲಿ, ಅಥವಾ ಬೆದರಿಸುವುದಾಗಲಿ ಅಥವಾ ಹಾಗೆ ಮಾಡಲು ಸಹಾಯ ಮಾಡುವುದಾಗಲಿ ಆಗಿದ್ದರೂ ಸಹ. ಇನ್ನು ಹರಮ್‌ನೊಳಗೆ ಬೇಟೆಯಾಡುವುದು ಇಹ್ರಾಮ್‌ನಲ್ಲಿರುವವರಿಗೂ ಇಹ್ರಾಮ್‌ನಲ್ಲಿಲ್ಲದ ವರಿಗೂ ನಿಷಿದ್ಧವಾಗಿದೆ.

**2. ಪುರುಷರಿಗೆ ಮಾತ್ರ ನಿಷಿದ್ಧವಾಗಿರುವ ವಿಷಯಗಳು:**

• ದೇಹದ ಆಕಾರಕ್ಕೆ ತಕ್ಕಂತೆ ಕತ್ತರಿಸಿ ಹೊಲಿಯಲಾದ ಅಂಗಿ, ಪ್ಯಾಂಟ್, ಕಾಲು ಕವಚ (ಸಾಕ್ಸ್) ಮೊದಲಾದ ಹೊಲಿದ ವಸ್ತ್ರಗಳನ್ನು

ಧರಿಸುವುದಕ್ಕೆ ಅನುಮತಿಯಿಲ್ಲ. ಆದರೆ ಇಝಾರ್ ಸಿಗದಿದ್ದರೆ ಪ್ಯಾಂಟ್ ಧರಿಸಲು ಅನುಮತಿಯಿದೆ ಮತ್ತು ಚಪ್ಪಲಿ ಸಿಗದಿದ್ದರೆ ಶೂ ಧರಿಸಲು ಅನುಮತಿಯಿದೆ.

• ರುಮಾಲು ಮೊದಲಾದ ತಲೆಗೆ ಅಂಟಿ ನಿಲ್ಲುವ ಶಿರವಸ್ತ್ರಗಳನ್ನು ಧರಿಸಲು ಅನುಮತಿಯಿಲ್ಲ.

**3. ಮಹಿಳೆಯರಿಗೆ ಮಾತ್ರ ನಿಷಿದ್ಧವಾಗಿರುವ ವಿಷಯಗಳು:**

• ಬುರ್ಖಾ, ನಿಕಾಬ್ ಮೊದಲಾದವುಗಳ ಮೂಲಕ ಮುಖವನ್ನು ಮುಚ್ಚಿಕೊಳ್ಳಲು ಮಹಿಳೆಯರಿಗೆ ಅನುಮತಿಯಿಲ್ಲ. ಆದರೆ ಅನ್ಯಪುರುಷರಿಂದ ಮರೆಮಾಚಿಕೊಳ್ಳಲು ಶಾಲು ಮೊದಲಾದವುಗಳಿಂದ ಮುಖವನ್ನು ಮುಚ್ಚಿಕೊಳ್ಳಬೇಕು.

## ಈ ನಿಷಿದ್ಧಗಳಲ್ಲಿ ಯಾವುದಾದರೊಂದನ್ನು ಮಾಡುವವನ ವಿಧಿ

1. ಮೇಲೆ ಹೇಳಲಾದ ನಿಷಿದ್ಧಗಳಲ್ಲಿ ಯಾವುದಾದರೊಂದನ್ನು ಅಜ್ಞಾನದಿಂದ, ಅಥವಾ ಮರೆವಿನಿಂದ, ಅಥವಾ ಇತರರ ಬಲವಂತದಿಂದ ಮಾಡಿದರೆ ಅದರಲ್ಲಿ ದೋಷವಿಲ್ಲ. ಅದಕ್ಕೆ ಫಿದ್ಯಃ(ಪ್ರಾಯಶ್ಚಿತ್ತ) ನೀಡಬೇಕಾಗಿಯೂ ಇಲ್ಲ.

2. ಇನ್ನು ಆ ನಿಷಿದ್ಧವನ್ನು ಮಾಡಿದ್ದು ಯಾವುದೋ ಆವಶ್ಯಕತೆಗಾಗಿದ್ದರೆ ಅದರಲ್ಲೂ ದೋಷವಿಲ್ಲ. ಆದರೆ ಅದಕ್ಕೆ ಫಿದ್ಯಃ(ಪ್ರಾಯಶ್ಚಿತ್ತ) ನೀಡಬೇಕಾಗಿದೆ.

3. ಇನ್ನು ಆ ನಿಷಿದ್ಧವನ್ನು ಮಾಡಿರುವುದು ಯಾವುದೇ ವಿನಾಯಿತಿಯಿಂದಾಗಲಿ ಅಥವಾ ಯಾವುದೇ ಆವಶ್ಯಕತೆಗಾಗಲಿ ಅಲ್ಲದಿದ್ದರೆ ಅದರಲ್ಲಿ ದೋಷವಿದೆ. ಅದಕ್ಕೆ ಫಿದ್ಯಃ(ಪ್ರಾಯಶ್ಚಿತ್ತ)ವನ್ನೂ ನೀಡಬೇಕಾಗಿದೆ.

## ಫಿದ್ಯಃ (ಪ್ರಾಯಶ್ಚಿತ್ತ)

1. ಕೂದಲು ಅಥವಾ ಉಗುರು ಕತ್ತರಿಸುವುದು; ಸುಗಂಧವನ್ನು ಹಚ್ಚುವುದು; ಕೈಕವಚವನ್ನು ಧರಿಸುವುದು; ಪುರುಷರು, ಹೊಲಿದ ವಸ್ತ್ರಗಳನ್ನು ಧರಿಸುವುದು; ಪುರುಷರು ತಲೆಯನ್ನು ಮುಚ್ಚುವುದು; ಮಹಿಳೆಯರು ನಿಕಾಬ್ ಧರಿಸುವುದು; ಕಾಮೋದ್ರೇಕದಿಂದ ಸ್ಪರ್ಶಿಸುವುದು; ಮೊದಲಾದ ನಿಷಿದ್ಧಗಳನ್ನು ಮಾಡಿದರೆ, ಪ್ರತಿಯೊಂದು ನಿಷಿದ್ಧಕ್ಕೂ ಈ ಕೆಳಗಿನ ಮೂರರಲ್ಲಿ ಯಾವುದಾದರೂ ಒಂದನ್ನು ಫಿದ್ಯಃ(ಪ್ರಾಯಶ್ಚಿತ್ತ) ಆಗಿ ಆರಿಸಬಹುದು:

- ನಿರಂತರ ಅಥವಾ ನಿರಂತರವಲ್ಲದೆ ಮೂರು ದಿನ ಉಪವಾಸ ಆಚರಿಸುವುದು.

- ಆರು ಮಂದಿ ಬಡವರಿಗೆ ಊಟ ಕೊಡುವುದು. ಅಂದರೆ ಪ್ರತಿ ಬಡವನಿಗೂ ಅರ್ಧ ಸಾಅ್ ಖರ್ಜೂರ, ಅಕ್ಕಿ ಮೊದಲಾದ ಆಹಾರಗಳನ್ನು ನೀಡುವುದು.

• ಕುರಿಯನ್ನು ಕೊಯ್ದು ಅದರ ಮಾಂಸವನ್ನು ಹರಮ್‌ನಲ್ಲಿರುವ ಬಡವರಿಗೆ ಹಂಚುವುದು.

2. ಮೀಕಾತ್‌ನಿಂದ ಇಹ್ರಾಮ್ ಮಾಡುವುದು; ಜಮ್ರಃಗಳಿಗೆ ಕಲ್ಲೆಸೆಯುವುದು; ಮುಝ್ದಲಿಫಃದಲ್ಲಿ ರಾತ್ರಿ ತಂಗುವುದು; ಮೊದಲಾದ ಹಜ್ಜ್ ಮತ್ತು ಉಮ್ರಃಗಳ ವಾಜಿಬ್‌ಗಳಲ್ಲಿ ಯಾವುದಾದರೊಂದು ವಾಜಿಬನ್ನು ನಿರ್ವಹಿಸದಿದ್ದರೆ ಮೃಗ ಬಲಿ ನೀಡುವುದು ಕಡ್ಡಾಯವಾಗಿದೆ. ಅಂದರೆ ಉದ್‌ಹಿಯ್ಯತ್‌ನಲ್ಲಿ ಮಾಡುವಂತೆ ಕುರಿ, ಆಡು –ಗಂಡು ಹೆಣ್ಣು ಯಾವುದೂ ಆಗಬಹುದು– ಅಥವಾ ಅದಕ್ಕೆ ಸರಿಸಮವಾಗುವ ಒಂಟೆಯ ಏಳನೇ ಒಂದು ಭಾಗ ಅಥವಾ ಹಸುವಿನ ಏಳನೇ ಒಂದು ಭಾಗವನ್ನು ಬಲಿ ನೀಡಬೇಕು. ಅದರ ಮಾಂಸವನ್ನು ಸಂಪೂರ್ಣವಾಗಿ ಹರಮ್‌ನಲ್ಲಿರುವ ಬಡವರಿಗೆ ಹಂಚಬೇಕು. ಅದರಿಂದ ಏನನ್ನೂ ತಿನ್ನಬಾರದು.

3. ಸಂಭೋಗ ಮಾಡಿದ್ದಕ್ಕಿರುವ ಫಿದ್ಯಃ(ಪ್ರಾಯಶ್ಚಿತ್ತ):

ಇಹ್ರಾಮ್‌ನಿಂದ ಮೊದಲನೆಯ ವಿಮುಕ್ತಿ ಪಡೆಯುವುದಕ್ಕೆ ಮೊದಲೇ ಯಾರಾದರೂ ಸಂಭೋಗ ಮಾಡಿದರೆ ಅವನ ಹಜ್ಜ್ ಅಸಿಂಧುವಾಗುವುದು. ಆದರೆ ಅವನು ಹಜ್ಜ್ ಕರ್ಮಗಳನ್ನು ಮುಂದುವರಿಸಬೇಕು ಮತ್ತು ಮುಂದಿನ ವರ್ಷ ಪುನಃ ಹಜ್ಜ್ ನಿರ್ವಹಿಸಬೇಕು. ಸಂಭೋಗ ಮಾಡಿದ್ದಕ್ಕೆ ಫಿದ್ಯಃ(ಪ್ರಾಯಶ್ಚಿತ್ತ)ವಾಗಿ ಒಂದು ಒಂಟೆಯನ್ನು ಅಥವಾ ಅದಕ್ಕೆ ಸರಿಸಮವಾಗುವ ಒಂದು ಹಸುವನ್ನು ಅಥವಾ ಏಳು ಕುರಿಗಳನ್ನು ಬಲಿನೀಡಬೇಕು. ಇನ್ನು ಮೊದಲನೆಯ ವಿಮುಕ್ತಿ ಪಡೆದ ಬಳಿಕ ಯಾರಾದರೂ ಸಂಭೋಗ ಮಾಡಿದರೆ ಅವನು ಒಂದು ಕುರಿಯನ್ನು ಅಥವಾ ಅದಕ್ಕೆ ಸರಿಸಮವಾಗುವ ಒಂಟೆ, ಹಸು ಮೊದಲಾದವುಗಳ ಏಳನೆ

ಒಂದು ಭಾಗವನ್ನು ಬಲಿ ನೀಡಬೇಕು. ಯಾರಿಗಾದರೂ ಇದಾವುದೂ ಸಾಧ್ಯವಾಗದಿದ್ದರೆ ಅವರು ಹತ್ತು ದಿನ ಉಪವಾಸ ಆಚರಿಸಬೇಕು.

4. ಇಹ್ರಾಮ್‌ನಲ್ಲಿರುವಾಗ ಬೇಟೆಯಾಡಿದರೆ ಬೇಟೆಯಾಡಿದ ಪ್ರಾಣಿಯನ್ನು ಅವಲಂಬಿಸಿ ಎರಡು ವಿಧಿಗಳಿವೆ:

ಒಂದು: ಬೇಟೆಯಾಡಿದ ಪ್ರಾಣಿಯು ಜಾನುವಾರುಗಳನ್ನು (ಆಡು, ಕುರಿ, ಹಸು, ಒಂಟೆ) ಹೋಲುತ್ತಿದ್ದರೆ ಈ ಕೆಳಗಿನ ಮೂರರಲ್ಲಿ ಯಾವುದಾದರೊಂದನ್ನು ಆರಿಸಬೇಕು:

- ಬೇಟೆಯಾಡಿದ ಪ್ರಾಣಿಯು ಯಾವ ಜಾನುವಾರನ್ನು ಹೋಲುತ್ತದೋ ಆ ಜಾನುವಾರನ್ನು ಬಲಿ ನೀಡಿ ಅದರ ಮಾಂಸವನ್ನು ಹರಮ್‌ನಲ್ಲಿರುವ ಬಡವರಿಗೆ ಹಂಚುವುದು.

- ಬೇಟೆಯಾಡಿದ ಪ್ರಾಣಿಯು ಯಾವ ಜಾನುವಾರನ್ನು ಹೋಲುತ್ತದೋ ಆ ಜಾನುವಾರಿಗೆ ಎಷ್ಟು ಬೆಲೆಯಿದೆಯೆಂದು ನೋಡಿ ಆ ಬೆಲೆಗೆ ಸಿಗುವ ಆಹಾರವನ್ನು ಖರೀದಿಸಿ, ಪ್ರತಿಯೊಬ್ಬ ಬಡವನಿಗೂ ಅರ್ಧ ಸಾಅ್‌ನಂತೆ ಅದನ್ನು ಬಡವರಿಗೆ ಹಂಚುವುದು.

- ಆ ಆಹಾರವನ್ನು ಎಷ್ಟು ಮಂದಿ ಬಡವರಿಗೆ ನೀಡಬಹುದೋ ಆ ಸಂಖ್ಯೆಯಷ್ಟು ಉಪವಾಸವನ್ನು ಆಚರಿಸುವುದು.

ಎರಡು: ಬೇಟೆಯಾಡಿದ ಪ್ರಾಣಿಯು ಜಾನುವಾರುಗಳನ್ನು ಹೋಲದಿದ್ದರೆ, ಅಂದರೆ ಅದು ಮಿಡತೆ ಮುಂತಾದವುಗಳಾಗಿದ್ದರೆ, ಈ ಕೆಳಗಿನ ಎರಡರಲ್ಲಿ ಒಂದನ್ನು ಆರಿಸಬೇಕು:

• ಬೇಟೆಯಾಡಿದ ಪ್ರಾಣಿಯ ಬೆಲೆ ಎಷ್ಟೆಂದು ನೋಡುವುದು ಮತ್ತು ಆ ಬೆಲೆಗೆ ಸಿಗುವ ಆಹಾರವನ್ನು ಪ್ರತಿಯೊಬ್ಬ ಬಡವನಿಗೆ ಅರ್ಧ ಸಾಅ್‌ನಂತೆ ಅದನ್ನು ಬಡವರಿಗೆ ಹಂಚುವುದು.

• ಅಥವಾ ಆ ಆಹಾರವನ್ನು ಎಷ್ಟು ಮಂದಿ ಬಡವರಿಗೆ ನೀಡಬಹುದೋ ಆ ಸಂಖ್ಯೆಯಷ್ಟು ಉಪವಾಸವನ್ನು ಆಚರಿಸುವುದು.

5. ತಡೆಗಿರುವ ಫಿದ್ಯಃ(ಪ್ರಾಯಶ್ಚಿತ್ತ):

ತನ್ನನ್ನು ಶತ್ರುಗಳು ಅಥವಾ ಇತರರು ಹಜ್ಜ್ ಅಥವಾ ಉಮ್ರಃ ನಿರ್ವಹಿಸುವುದರಿಂದ ತಡೆದರೆ ನಾನು ಆ ಸ್ಥಳದಲ್ಲೇ ಇಹ್ರಾಮ್‌ನಿಂದ ಮುಕ್ತನಾಗುವೆನು ಎಂದು ಇಹ್ರಾಮ್ ಮಾಡುವಾಗ ನಿಬಂಧನೆಯಿಡದೆ ಇಹ್ರಾಮ್ ಮಾಡಿದ ವ್ಯಕ್ತಿಯನ್ನು ಶತ್ರುಗಳು ಅಥವಾ ಬೇರೆ ಯಾರಾದರೂ ತಡೆದರೆ ಅವನು ಬಲಿಮೃಗವನ್ನು ಬಲಿ ನೀಡಬೇಕು ಮತ್ತು ತಲೆಗೂದಲನ್ನು ಬೋಳಿಸಿ ಅಥವಾ ಗಿಡ್ಡಗೊಳಿಸಿ ಇಹ್ರಾಮ್‌ನಿಂದ ಮುಕ್ತನಾಗಬೇಕು. ಅವನನ್ನು ತಡೆಯಲಾದ ಸ್ಥಳದಲ್ಲೇ ಅವನು ಬಲಿಮೃಗವನ್ನು ಬಲಿ ನೀಡಬೇಕು. ಅದು ಹರಮ್‌ನಲ್ಲಾಗಿದ್ದರೂ ಹರಮ್‌ನ ಹೊರಗಡೆಯಾಗಿದ್ದರೂ ಸರಿ. ಅದರ ಮಾಂಸವನ್ನು ಬಡವರಿಗೆ ನೀಡಬೇಕು.

ಬಲಿ ನೀಡಲು ಸಾಧ್ಯವಾಗದಿದ್ದರೆ ಹತ್ತು ದಿನ ಉಪವಾಸ ಆಚರಿಸಬೇಕು. ಬಳಿಕ ತಲೆಗೂದಲನ್ನು ಬೋಳಿಸಿ ಅಥವಾ ಗಿಡ್ಡಗೊಳಿಸಿ ಇಹ್ರಾಮ್‌ನಿಂದ ಮುಕ್ತನಾಗಬೇಕು.

## ಇಹ್ರಾಮ್ ಮಾಡುವುದು ಹೇಗೆ?

ಉಮ್ರಃ ಅಥವಾ ಹಜ್ಜ್‌ಗಾಗಿ ಇಹ್ರಾಮ್ ಮಾಡಲು ಉದ್ದೇಶಿಸುವವರು ಇಹ್ರಾಮ್ ಮಾಡುವುದಕ್ಕೆ ಮೊದಲು ನಿರ್ವಹಿಸಬೇಕಾದ ಕೆಲವು ಕಾರ್ಯಗಳು ಹೀಗಿವೆ:

1. ಮೀಕಾತ್‌ಗೆ ತಲುಪಿದರೆ ಸ್ನಾನ ಮಾಡುವುದು, ಸ್ವಚ್ಛಗೊಳ್ಳುವುದು, ಕಂಕುಳದ ಮತ್ತು ಗುಹ್ಯಭಾಗದ ರೋಮಗಳನ್ನು ನಿವಾರಿಸುವುದು ಮತ್ತು ಉಗುರುಗಳನ್ನು ಕತ್ತರಿಸುವುದು ಅಪೇಕ್ಷಣೀಯವಾಗಿದೆ. ಯಾಕೆಂದರೆ ಇಹ್ರಾಮ್ ಮಾಡಿದ ಬಳಿಕ ಇವುಗಳ ಆವಶ್ಯಕತೆಯು ಬರದಿರುವುದಕ್ಕಾಗಿ.

2. ದೇಹಕ್ಕೆ ಸುಗಂಧವನ್ನು ಹಚ್ಚುವುದು ಸುನ್ನತ್ತಾಗಿದೆ. ಆದರೆ ಇಹ್ರಾಮ್‌ನ ಬಟ್ಟೆಗಳಿಗೆ ಸುಗಂಧ ಹಚ್ಚಬಾರದು.

3. ಪುರುಷರು ಇಹ್ರಾಮ್‌ನ ಉಡುಪುಗಳಾದ ಇಝಾರ್ ಮತ್ತು ರಿದಾಅ್ ಅನ್ನು ಧರಿಸಬೇಕು. ಅದು ಬಿಳಿ ಬಣ್ಣದ್ದಾಗಿದ್ದರೆ ಮತ್ತು ಸ್ವಚ್ಛವಾಗಿದ್ದರೆ ಅತ್ಯುತ್ತಮ. ಮಹಿಳೆಯು ಆಕೆ ಇಷ್ಟಪಡುವ ಯಾವುದೇ ಉಡುಪನ್ನೂ ಧರಿಸಬಹುದು. ಆದರೆ ಅದು ಸೌಂದರ್ಯ ಪ್ರದರ್ಶನ ಮಾಡುವ ಉಡುಪಾಗಿರಬಾರದು. ಮುಖವನ್ನು ಮುಚ್ಚುವ ನಿಕಾಬ್ ಮೊದಲಾದವುಗಳನ್ನು, ಅಂದರೆ ಮುಖದ ಆಕಾರಕ್ಕೆ ಹೊಲಿಯಲಾಗಿರುವಂತದ್ದನ್ನು ಧರಿಸಬಾರದು. ಅದೇ ರೀತಿ ಕೈಕವಚಗಳನ್ನು ಧರಿಸಿದ್ದರೆ ಅದನ್ನು ಕಳಚಬೇಕು. ಪರಪುರುಷರಿಂದ ಮರೆಮಾಚಿಕೊಳ್ಳಲು ತಮ್ಮ ಮುಖದ ಮೇಲೆ ಶಾಲು ಮೊದಲಾದವುಗಳನ್ನು ಹಾಕಬೇಕು.

4. ಮಹಿಳೆಯು ಋತುಸ್ರಾವವಿರುವವಳಾಗಿದ್ದರೆ ಅಥವಾ ಹೆರಿಗೆ ರಕ್ತವಿರುವವಳಾಗಿದ್ದರೆ ಆಕೆ ಸ್ನಾನ ಮಾಡಿ ಶುಚಿಯಾಗಿ ಇತರ ಮಹಿಳೆಯರಂತೆಯೇ ಇಹ್ರಾಮ್ ಮಾಡಬೇಕು ಮತ್ತು ಹಾಜಿಗಳು ಮಾಡುವುದೆಲ್ಲವನ್ನೂ ಮಾಡಬೇಕು. ಆದರೆ ಕಅ್‌ಬಾಲಯಕ್ಕೆ ತವಾಫ್ ಮಾಡಬಾರದು. ಆಕೆ ಉಮ್ರಃ ನಿರ್ವಹಿಸುವವಳಾಗಿದ್ದರೆ ಶುದ್ಧಿಯಾಗುವ

ತನಕ ಇಹ್ರಾಮ್‌ನಲ್ಲಿಯೇ ಇದ್ದು ತರುವಾಯ ಸ್ನಾನ ಮಾಡಿ ಉಮ್ರಃವನ್ನು ಪೂರ್ಣಗೊಳಿಸಬೇಕು.

5. ಸ್ನಾನ ಮತ್ತು ಶುಚೀಕರಿಸುವುದನ್ನು ಮಾಡಿದ ಬಳಿಕ ಇಹ್ರಾಮ್‌ನ ಉಡುಪುಗಳನ್ನು ಧರಿಸಿ ತಾನು ಪ್ರವೇಶಿಸುವ ಕರ್ಮಕ್ಕಾಗಿ (ಹಜ್ಜ್ ಅಥವಾ ಉಮ್ರಃ) ಹೃದಯದಲ್ಲಿ ನಿಯ್ಯತ್ ಮಾಡಬೇಕು.

6. ಇಹ್ರಾಮ್ ಮಾಡುವವನು ತಾನು ಉದ್ದೇಶಿಸುವ ಕರ್ಮಕ್ಕಾಗಿರುವ ನಿಯ್ಯತ್ತನ್ನು ಉಚ್ಛರಿಸಬೇಕು.

ಉಮ್ರಃ ನಿರ್ವಹಿಸುವುದಾದರೆ 'ಲಬ್ಬೈಕ ಉಮ್ರತನ್' (لَبَّيْكَ عُمْرَةً) ಎಂದು ಹೇಳಬೇಕು.

ಇಫ್ರಾದ್ ಆಗಿ ಹಜ್ಜ್ ನಿರ್ವಹಿಸುವುದಾದರೆ 'ಲಬ್ಬೈಕ ಹಜ್ಜನ್' ( لَبَّيْكَ حَجًّا) ಎಂದು ಹೇಳಬೇಕು.

ತಮತ್ತುಅ್ ಆಗಿ ಹಜ್ಜ್ ನಿರ್ವಹಿಸುವುದಾದರೆ 'ಲಬ್ಬೈಕಲ್ಲಾಹುಮ್ಮ ಉಮ್ರತನ್' (لَبَّيْكَ اللَّهُمَّ عُمْرَةً) ಎಂದು ಹೇಳಬೇಕು.

ಕಿರಾನ್ ಆಗಿ ಹಜ್ಜ್ ನಿರ್ವಹಿಸುವುದಾದರೆ 'ಲಬ್ಬೈಕಲ್ಲಾಹುಮ್ಮ ಉಮ್ರತನ್ ವ ಹಜ್ಜನ್' (لَبَّيْكَ اللَّهُمَّ عُمْرَةً وَحَجًّا) ಎಂದು ಹೇಳಬೇಕು.

ಇನ್ನೊಬ್ಬರ ಪರವಾಗಿ ಹಜ್ಜ್ ಅಥವಾ ಉಮ್ರಃ ನಿರ್ವಹಿಸುವುದಾದರೆ 'ಲಬ್ಬೈಕ ಹಜ್ಜನ್ ಅನ್' ಅಥವಾ 'ಲಬ್ಬೈಕ ಉಮ್ರತನ್ ಅನ್' ಎಂದು ಹೇಳಿ ಆ ವ್ಯಕ್ತಿಯ ಹೆಸರನ್ನು ಹೇಳಬೇಕು.

7. ಹಜ್ಜ್ ಅಥವಾ ಉಮ್ರಃವನ್ನು ಪೂರ್ಣಗೊಳಿಸುವುದಕ್ಕೆ ಮೊದಲೇ ಯಾವುದಾದರೂ ಅಡ್ಡಿಯು ತನ್ನನ್ನು ತಡೆಯಬಹುದು ಎಂಬ ಭಯವಿದ್ದರೆ ಇಹ್ರಾಮ್ ಮಾಡುವಾಗ "ಇನ್ ಹಬಸನೀ ಹಾಬಿಸುನ್ ಫ ಮಹಿಲ್ಲೀ ಹೈಸು ಹಬಸ್ತನೀ' (ಯಾವುದಾದರೂ ಅಡ್ಡಿಯು ನನ್ನನ್ನು ತಡೆದರೆ ನನ್ನ ಸ್ಥಳವು ನೀನು ನನ್ನನ್ನು ಎಲ್ಲಿ ತಡೆದೆಯೋ ಅಲ್ಲೇ ಆಗಿದೆ) ಎಂದು ಹೇಳಬೇಕು. ಯಾಕೆಂದರೆ ಹೀಗೆ ಹೇಳಿದವರಿಗೆ ಯಾವುದಾದರೂ ಅಡ್ಡಿಯುಂಟಾಗಿ ಹಜ್ಜ್ ಅಥವಾ ಉಮ್ರಃ ನಿರ್ವಹಿಸಲು ಸಾಧ್ಯವಾಗದಿದ್ದರೆ ಅವರು ಇಹ್ರಾಮನ್ನು ಕಳಚಬಹುದು. ಅವರು ಏನನ್ನೂ ಫಿದ್ಯಃ (ಪ್ರಾಯಶ್ಚಿತ್ತ) ನೀಡಬೇಕಾಗಿಲ್ಲ.

8. ಅತ್ಯಧಿಕವಾಗಿ ಅಲ್ಲಾಹನ ದಿಕ್ರ್ ಮತ್ತು ತಲ್ಬಿಯತ್ ಹೇಳುತ್ತಿರಬೇಕು. ತಲ್ಬಿಯತ್‌ನ ರೂಪವು ಹೀಗಿದೆ:

لَبَّيْكَ اللَّهُمَّ لَبَّيْكَ، لَبَّيْكَ لَا شَرِيكَ لَكَ لَبَّيْكَ، إِنَّ الْحَمْدَ وَالنِّعْمَةَ لَكَ وَالْمُلْكُ، لَا شَرِيكَ لَكَ.

"ಲಬ್ಬೈಕಲ್ಲಾಹುಮ್ಮ ಲಬ್ಬೈಕ್, ಲಬ್ಬೈಕ ಲಾ ಶರೀಕ ಲಕ ಲಬ್ಬೈಕ್, ಇನ್ನಲ್ ಹಮ್ದ ವನ್ನಿಅ್‌ಮತ ಲಕ ವಲ್ ಮುಲ್ಕ್, ಲಾ ಶರೀಕ ಲಕ್"

ಪುರುಷರು ಗಟ್ಟಿಸ್ವರದಲ್ಲಿ ತಲ್ಬಿಯತ್ ಹೇಳಬೇಕು ಮತ್ತು ಮಹಿಳೆಯರು ಅನ್ಯಪುರುಷರ ಬಳಿಯಿರುವಾಗ ಮೆತ್ತಗೆ ತಲ್ಬಿಯತ್ ಹೇಳಬೇಕು.

## ಉಮ್ರಃ ಮಾಡುವುದು ಹೇಗೆ?

1. ಪವಿತ್ರ ಮಂದಿರ (ಅಲ್‌ಬೈತುಲ್ ಹರಾಮ್) ವನ್ನು ಪ್ರವೇಶಿಸುವಾಗ ಬಲಗಾಲನ್ನು ಮುಂದಿಡುವುದು ಮತ್ತು ಈ ಕೆಳಗಿನ ದಿಕ್ರನ್ನು ಹೇಳುವುದು ಸುನ್ನತ್ತಾಗಿದೆ:

«بِسْمِ اللَّهِ وَالصَّلَاةُ وَالسَّلَامُ عَلَى رَسُولِ اللَّهِ، اللَّهُمَّ اغْفِرْ لِي ذُنُوبِي وَافْتَحْ لِي أَبْوَابَ رَحْمَتِكَ».

(ಬಿಸ್ಮಿಲ್ಲಾಹಿ ವಸ್ಸಲಾತು ವಸ್ಸಲಾಮು ಅಲಾ ರಸೂಲಿಲ್ಲಾಹಿ, ಅಲ್ಲಾಹುಮ್ಮಗ್‌ಫಿರ್ ಲೀ ದುನೂಬೀ ವಫ್ತಹ್ ಲೀ ಅಬ್ವಾಬ ರಹ್ಮತಿಕ)

“ಅಲ್ಲಾಹನ ನಾಮದಿಂದ ಮತ್ತು ಅಲ್ಲಾಹನ ರಸೂಲರ ಮೇಲೆ ಸಲಾತ್ ಮತ್ತು ಸಲಾಮ್ ಇರಲಿ, ಓ ಅಲ್ಲಾಹ್ ನನ್ನ ಪಾಪಗಳನ್ನು ಕ್ಷಮಿಸು ಮತ್ತು ನಿನ್ನ ಕರುಣೆಯ ಬಾಗಿಲುಗಳನ್ನು ನನಗೆ ತೆರೆದುಕೊಡು.”

ಇದು ಎಲ್ಲಾ ಮಸೀದಿಗಳನ್ನು ಪ್ರವೇಶ ಮಾಡುವಾಗ ಹೇಳುವಂತದ್ದೇ ಆಗಿದೆ.

2. ತವಾಫ್ ಮಾಡುವುದಕ್ಕಾಗಿ ಕಅ್‌ಬಾಲಯವನ್ನು ತಲುಪಿದರೆ ತಲ್ಬಿಯಃ ಉಚ್ಛರಿಸುವುದನ್ನು ನಿಲ್ಲಿಸಬೇಕು. ಅಲ್‌ಹಜರುಲ್ ಅಸ್ವದ್‌ನ ಬಳಿಯಿಂದ ತವಾಫ್ ಮಾಡಲು ಆರಂಭಿಸಬೇಕು. ಇತರ ಮುಸ್ಲಿಮ್ ಸಹೋದರರಿಗೆ ತೊಂದರೆ ಕೊಡದೆ ಅಲ್‌ಹಜರುಲ್ ಅಸ್ವದನ್ನು ಚುಂಬಿಸಲು ಅಥವಾ ಕೈಯಿಂದ ಸ್ಪರ್ಶಿಸಿ ಕೈಯನ್ನು ಚುಂಬಿಸಲು ಸಾಧ್ಯವಾದರೆ ಹಾಗೆ ಮಾಡಬೇಕು. ಅದು ಸಾಧ್ಯವಾಗದಿದ್ದರೆ ಅದರೆಡೆಗೆ ಕೈ (ಬಲಗೈ) ತೋರಿಸಿ ‘ಅಲ್ಲಾಹು ಅಕ್ಬರ್’ ಎಂದು ಹೇಳಬೇಕು. ಅಲ್‌ಹಜರುಲ್ ಅಸ್ವದ್‌ನ ಬಳಿಯಿಂದ ಆರಂಭಿಸಿ ಅಲ್ಲಿಗೇ ಕೊನೆಗೊಳ್ಳುವಂತೆ ಕಅ್‌ಬಾಲಯಕ್ಕೆ ಏಳು ಬಾರಿ ಪ್ರದಕ್ಷಿಣೆ ಮಾಡಬೇಕು.

ಮೊದಲ ಮೂರು ಪ್ರದಕ್ಷಿಣೆಗಳಲ್ಲಿ ರಮ್ಲ್ ಮಾಡಬೇಕು. 'ರಮ್ಲ್' (الرَّمْل) ಎಂದರೆ ಹತ್ತಿರ ಹತ್ತಿರ ಹೆಜ್ಜೆಗಳನ್ನಿಟ್ಟು ವೇಗವಾಗಿ ನಡೆಯುವುದು. ಉಳಿದ ನಾಲ್ಕು ಪ್ರದಕ್ಷಿಣೆಗಳಲ್ಲಿ ಸಾಧಾರಣ ರೀತಿಯಲ್ಲಿ ನಡೆಯಬೇಕು. ಎಲ್ಲ ಪ್ರದಕ್ಷಿಣೆಗಳಲ್ಲೂ ಇದ್ತಿಬಾಅ್ ಮಾಡುವುದು ಅಪೇಕ್ಷಣೀಯ. 'ಇದ್ತಿಬಾಅ್' (اضْطِبَاع) ಎಂದರೆ ಮೇಲುಡುಪಿನ ಒಂದು ತುದಿಯನ್ನು ಬಲ ಕಂಕುಳದ ಅಡಿಯಿಂದ ತಂದು ಎಡ ಹೆಗಲಿನ ಮೇಲೆ ಕಟ್ಟುವುದು. ಇದರಿಂದಾಗಿ ಬಲ ಹೆಗಲು ತೆರೆದುಕೊಂಡಿರುತ್ತದೆ. ಇದು ತವಾಫುಲ್ ಕುದೂಮ್ ಮತ್ತು ತವಾಫುಲ್ ಉಮ್ರಃಕ್ಕೆ ಪ್ರತ್ಯೇಕವಾಗಿ ಇರುವುದಾಗಿದೆ. ರಮ್ಲ್ ಮತ್ತು ಇದ್ತಿಬಾಅ್ ಪುರುಷರಿಗೆ ಮಾತ್ರ. ಮಹಿಳೆಯರಿಗಿಲ್ಲ. ತವಾಫ್ ಮಾಡುವಾಗ ದುಆ ದಿಕ್ರ್‌ಗಳನ್ನು ಹೆಚ್ಚಿಸುವುದು, ಅಲ್ಲಾಹನನ್ನು ಮಹತ್ವಪಡಿಸುವುದು ಮತ್ತು ಪಾಪಗಳೆಲ್ಲವನ್ನೂ ಕ್ಷಮಿಸಲು ಅಲ್ಲಾಹನಲ್ಲಿ ಅತ್ಯಧಿಕವಾಗಿ ಬೇಡುವುದು ಇತ್ಯಾದಿ ಮಾಡಬೇಕು. ತವಾಫ್ ಮಾಡುವಾಗ ಹೇಳಬೇಕಾದ ಪ್ರತ್ಯೇಕವಾದ ದುಆ ದಿಕ್ರ್‌ಗಳಿಲ್ಲ. ಯಾವುದೇ ದುಆಗಳನ್ನೂ (ಯಾವುದೇ ಭಾಷೆಯಲ್ಲೂ ಆಗಬಹುದು) ಪ್ರಾರ್ಥಿಸಬಹುದು.

3. ಬಿಸ್ಮಿಲ್ಲಾಹಿ ವಲ್ಲಾಹು ಅಕ್ಬರ್ ಎನ್ನುತ್ತಾ ರುಕ್ನುಲ್ ಯಮಾನೀಯನ್ನು ಕೈಯಿಂದ ಸ್ಪರ್ಶಿಸುವುದು ಸುನ್ನತ್ತಾಗಿದೆ. ಆದರೆ ಅದನ್ನು ಚುಂಬಿಸಬಾರದು. ರುಕ್ನುಲ್ ಯಮಾನೀ ಮತ್ತು ಅಲ್‌ಹಜರುಲ್ ಅಸ್ವದ್‌ನ ಮಧ್ಯೆ ಬರುವಾಗ

رَبَّنَا آتِنَا فِي الدُّنْيَا حَسَنَةً وَفِي الْآخِرَةِ حَسَنَةً وَقِنَا عَذَابَ النَّارِ

(ರಬ್ಬನಾ ಆತಿನಾ ಫಿದ್ದುನ್ಯಾ ಹಸನತನ್ ವಫಿಲ್ ಆಖಿರತಿ ಹಸನತನ್ ವಕಿನಾ ಅದಾಬನ್ನಾರ್)

“ಓ ನಮ್ಮ ರಬ್ಬೇ, ನಮಗೆ ಇಹಲೋಕದಲ್ಲಿ ಒಳಿತನ್ನು ನೀಡು ಮತ್ತು ಪರಲೋಕದಲ್ಲೂ ಒಳಿತನ್ನು ನೀಡು ಮತ್ತು ನಮ್ಮನ್ನು ನರಕ ಶಿಕ್ಷೆಯಿಂದ ಪಾರು ಮಾಡು” ಎಂದು ಪ್ರಾರ್ಥಿಸಬೇಕು.

4. ತವಾಫ್ ನಿರ್ವಹಿಸಿದ ಬಳಿಕ ಮೇಲುಡುಪನ್ನು ಎರಡು ಹೆಗಲುಗಳ ಮೇಲೆ ಹಾಕಿ ಸಾಧ್ಯವಾದರೆ ಮಕಾಮ್ ಇಬ್ರಾಹೀಮ್‌ನ ಹಿಂದೆ ಎರಡು ರಕ್‌ಅತ್ ನಮಾಝ್ ನಿರ್ವಹಿಸಬೇಕು. ಅಲ್ಲಿ ನಮಾಝ್ ನಿರ್ವಹಿಸಲು ಸಾಧ್ಯವಾಗದಿದ್ದರೆ ಮಸೀದಿಯ ಯಾವುದೇ ಭಾಗದಲ್ಲೂ ನಮಾಝ್ ನಿರ್ವಹಿಸಬಹುದು. ಈ ನಮಾಝ್‌ನ ಮೊದಲ ರಕ್‌ಅತ್‌ನಲ್ಲಿ ಸೂರಃ ಅಲ್‌ಫಾತಿಹಃದ ಬಳಿಕ ಸೂರಃ ಅಲ್‌ಕಾಫಿರೂನ್ ಮತ್ತು ಎರಡನೆ ರಕ್‌ಅತ್‌ನಲ್ಲಿ ಸೂರಃ ಅಲ್‌ಫಾತಿಹಃದ ಬಳಿಕ ಸೂರಃ ಅಲ್‌ಇಖ್ಲಾಸ್ ಪಾರಾಯಣ ಮಾಡುವುದು ಸುನ್ನತ್ತಾಗಿದೆ.

5. ಈ ಎರಡು ರಕ್‌ಅತ್ ನಮಾಝ್ ನಿರ್ವಹಿಸಿದ ಬಳಿಕ ಅಲ್‌ಹಜರುಲ್ ಅಸ್ವದ್‌ನ ಬಳಿಗೆ ತೆರಳಿ ಸಾಧ್ಯವಾದರೆ ಅದನ್ನು ಸ್ಪರ್ಶಿಸಿ ಚುಂಬಿಸುವುದು ಮತ್ತು ತರುವಾಯ ಝಮ್‌ಝಮ್ ನೀರನ್ನು ಕುಡಿಯುವುದು ಸುನ್ನತ್ತಾಗಿದೆ.

6. ನಂತರ ಸಫಾದೆಡೆಗೆ ತೆರಳಿ ಅದನ್ನು ಏರಿ ಅಲ್ಲಾಹನ ಈ ವಚನವನ್ನು ಪಾರಾಯಣ ಮಾಡಬೇಕು:

﴿۞إِنَّ ٱلصَّفَا وَٱلۡمَرۡوَةَ مِن شَعَآئِرِ ٱللَّهِۖ فَمَنۡ حَجَّ ٱلۡبَيۡتَ أَوِ ٱعۡتَمَرَ فَلَا جُنَاحَ عَلَيۡهِ أَن يَطَّوَّفَ بِهِمَاۚ وَمَن تَطَوَّعَ خَيۡرٗا فَإِنَّ ٱللَّهَ شَاكِرٌ عَلِيمٌ ١٥٨﴾ [البقرة: 158] .

(ಇನ್ನ ಸ್ಸಫಾ ವಲ್ ಮರ್ವತ ಮಿನ್ ಶಆಇರಿಲ್ಲಾಹಿ, ಫಮನ್ ಹಜ್ಜಲ್ ಬೈತ ಅವಿಅ್‌ತಮರ ಫಲಾ ಜುನಾಹ ಅಲೈಹಿ ಅನ್ ಯತ್ತವ್ವಫ ಬಿಹಿಮಾ, ವಮನ್ ತತವ್ವಅ ಖೈರನ್ ಫಇನ್ನಲ್ಲಾಹ ಶಾಕಿರುನ್ ಅಲೀಮ್)

"ಸಫಾ ಮತ್ತು ಮರ್ವಾ ಅಲ್ಲಾಹನ ಲಾಂಛನಗಳಲ್ಲಿ ಒಳಗೊಂಡದ್ದಾಗಿವೆ. ಆದ್ದರಿಂದ ಯಾರಾದರೂ ಕಅ್‌ಬಾಲಯಕ್ಕೆ ಹಜ್ಜ್ ಅಥವಾ ಉಮ್ರಾ ನಿರ್ವಹಿಸಿದರೆ, ಅವುಗಳ ಮಧ್ಯೆ ತವಾಫ್ ಮಾಡುವುದರಲ್ಲಿ ಅವನ ಮೇಲೆ ದೋಷವಿಲ್ಲ. ಯಾರಾದರೂ ಸ್ವಯಂಪ್ರೇರಿತರಾಗಿ ಒಳಿತನ್ನು ಮಾಡಿದರೆ ಖಂಡಿತವಾಗಿಯೂ ಅಲ್ಲಾಹು ಕೃತಜ್ಞನೂ ಸರ್ವಜ್ಞನೂ ಆಗಿದ್ದಾನೆ."

ನಂತರ ಕಿಬ್ಲದೆಡೆಗೆ ತಿರುಗಿ ಅಲ್‌ಹಮ್ದುಲಿಲ್ಲಾಹ್ ಮತ್ತು ಅಲ್ಲಾಹು ಅಕ್ಬರ್ ಎಂದು ಹೇಳಿ ತರುವಾಯ ಈ ಪ್ರಾರ್ಥನೆಯನ್ನು ಹೇಳುವುದು ಅಪೇಕ್ಷಣೀಯವಾಗಿದೆ:

« لَا إِلَهَ إِلَّا اللَّهُ وَاللَّهُ أَكْبَرُ، لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ، يُحْيِي وَيُمِيتُ، وَهُوَ عَلَى كُلِّ شَيْءٍ قَدِيرٌ، لَا إِلَهَ إِلَّا اللَّهُ وَحْدَهُ، أَنْجَزَ وَعْدَهُ، وَنَصَرَ عَبْدَهُ، وَهَزَمَ الْأَحْزَابَ وَحْدَهُ »

(ಲಾ ಇಲಾಹ ಇಲ್ಲಲ್ಲಾಹು ವಲ್ಲಾಹು ಅಕ್ಬರ್, ಲಾ ಇಲಾಹ ಇಲ್ಲಲ್ಲಾಹು ವಹ್ದಹು ಲಾ ಶರೀಕ ಲಹು, ಲಹುಲ್ ಮುಲ್ಕು ವಲಹುಲ್ ಹಮ್ದು, ಯುಹ್ಯೀ ವಯುಮೀತು, ವಹುವ ಅಲಾ ಕುಲ್ಲಿ ಶೈಇನ್ ಕದೀರ್, ಲಾ ಇಲಾಹ ಇಲ್ಲಲ್ಲಾಹು ವಹ್ದಹು, ಅನ್ಜಝ ವಅ್‌ದಹು, ವನಸರ ಅಬ್ದಹು, ವಹಝಮಲ್ ಅಹ್‌ಝಾಬ ವಹ್ದಹು.)

“ಅಲ್ಲಾಹನ ಹೊರತು ಆರಾಧಿಸಲ್ಪಡುವ ಹಕ್ಕನ್ನು ಹೊಂದಿರುವ ಅನ್ಯ ಆರಾಧ್ಯರಿಲ್ಲ, ಅಲ್ಲಾಹು ಮಹಾನನು. ಅಲ್ಲಾಹನ ಹೊರತು ಆರಾಧಿಸಲ್ಪಡುವ ಹಕ್ಕನ್ನು ಹೊಂದಿರುವ ಅನ್ಯ ಆರಾಧ್ಯರಿಲ್ಲ, ಅವನು ಏಕೈಕನು. ಅವನಿಗೆ ಯಾವುದೇ ಸಹಭಾಗಿಗಳಿಲ್ಲ. ಆಧಿಪತ್ಯವು ಅವನದ್ದು ಮತ್ತು ಸರ್ವಸ್ತುತಿ ಅವನಿಗೆ. ಅವನು ಜೀವವನ್ನು ನೀಡುವವನು ಮತ್ತು ಮರಣವನ್ನು ನೀಡುವವನು. ಅವನು ಎಲ್ಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನು. ಅಲ್ಲಾಹನ ಹೊರತು ಆರಾಧಿಸಲ್ಪಡುವ ಹಕ್ಕನ್ನು ಹೊಂದಿರುವ ಅನ್ಯ ಆರಾಧ್ಯರಿಲ್ಲ, ಅವನು ಏಕೈಕನು. ಅವನು ತನ್ನ ವಾಗ್ದಾನವನ್ನು ಪಾಲಿಸಿದ್ದಾನೆ. ತನ್ನ ದಾಸನಿಗೆ ಸಹಾಯ ಮಾಡಿದ್ದಾನೆ ಮತ್ತು ಶತ್ರುಗಳನ್ನು ಅವನೊಬ್ಬನೇ ಸೋಲಿಸಿದ್ದಾನೆ.”

ಈ ಪ್ರಾರ್ಥನೆಯನ್ನು ಮೂರು ಬಾರಿ ಪುನರಾವರ್ತಿಸಬೇಕು ಮತ್ತು ಸಾಧ್ಯವಾದರೆ ಇದರೊಂದಿಗೆ ಇತರ ಯಾವುದಾದರೂ ಪ್ರಾರ್ಥನೆಗಳನ್ನು (ಯಾವುದೇ ಭಾಷೆಯಲ್ಲೂ ಆಗಬಹುದು) ಪ್ರಾರ್ಥಿಸಬೇಕು.

ನಂತರ ಸಫಾದಿಂದ ಇಳಿದು ಮರ್ವಾದೆಡೆಗೆ ಚಲಿಸಬೇಕು. ಚಲಿಸುವಾಗ ಎರಡು ಹಸಿರು ಕಂಬಗಳ ನಡುವೆ ವೇಗವಾಗಿ ನಡೆಯಬೇಕು. ಇದು ಪುರುಷರಿಗೆ ಮಾತ್ರ. ಮಹಿಳೆಯರು ಎರಡು ಹಸಿರು ಕಂಬಗಳ ನಡುವೆ ವೇಗವಾಗಿ ಚಲಿಸಬಾರದು. ಅವರು ಸಾಧಾರಣ ರೀತಿಯಲ್ಲೇ ನಡೆಯಬೇಕು.

ನಂತರ ಮರ್ವವನ್ನು ಏರಿ ಸಫಾದಲ್ಲಿ ಮಾಡಿದಂತೆಯೇ ಅಲ್ಲೂ ಮಾಡಬೇಕು. ಇಲ್ಲಿಗೆ ಒಂದು ಪ್ರದಕ್ಷಿಣೆ ಮುಕ್ತಾಯವಾಗುತ್ತದೆ. ನಂತರ ಸಫಾದೆಡೆಗೆ ತೆರಳಬೇಕು. ಎರಡು ಹಸಿರು ಕಂಬಗಳ ನಡುವೆ ವೇಗವಾಗಿ ನಡೆಯಬೇಕು. ನಂತರ ಸಫಾವನ್ನು ಏರಿ ಮೊದಲು ಮಾಡಿದಂತೆಯೇ ಮಾಡಬೇಕು. ಇಲ್ಲಿಗೆ ಎರಡು ಪ್ರದಕ್ಷಿಣೆ ಮುಕ್ತಾಯವಾಗುತ್ತದೆ. ಹೀಗೆ ಒಟ್ಟು

ಏಳು ಪ್ರದಕ್ಷಿಣೆಗಳನ್ನು ನಿರ್ವಹಿಸಬೇಕು. ಈ ಏಳು ಪ್ರದಕ್ಷಿಣೆಗಳು ಸಫಾದಿಂದ ಆರಂಭಗೊಂಡು ಮರ್ವಾದಲ್ಲಿ ಕೊನೆಗೊಳ್ಳುತ್ತದೆ.

7. ಸಅ್‌ಯ್ ನಿರ್ವಹಿಸುವಾಗ ದುಆ ದಿಕ್ರ್‌ಗಳನ್ನು ಹೆಚ್ಚಿಸುವುದು ಅಪೇಕ್ಷಣೀಯವಾಗಿದೆ. ಅದೇ ರೀತಿ ಕಿರಿಯ ಮತ್ತು ಹಿರಿಯ ಅಶುದ್ಧಿಗಳಿಂದ ಶುದ್ಧಿಯಾಗಿರುವುದು ಕೂಡ ಅಪೇಕ್ಷಣೀಯವಾಗಿದೆ. ಆದರೆ ಶುದ್ಧಿಯಾಗಿರದೆ ಸಅ್‌ಯ್ ನಿರ್ವಹಿಸಿದರೂ ಅದು ಸಿಂಧುವಾಗುತ್ತದೆ. ಅದೇ ರೀತಿ ತವಾಫ್ ನಿರ್ವಹಿಸಿದ ಬಳಿಕ ಮಹಿಳೆಗೆ ಋತುಸ್ರಾವ ಅಥವಾ ಹೆರಿಗೆ ರಕ್ತವುಂಟಾದರೆ ಆಕೆ ಸಅ್‌ಯ್ ನಿರ್ವಹಿಸುವುದರಲ್ಲಿ ತೊಂದರೆಯಿಲ್ಲ. ಯಾಕೆಂದರೆ ಶುದ್ಧಿಯು ಸಅ್‌ಯ್‌ನ ಶರತ್ತುಗಳಲ್ಲಿ ಒಳಪಟ್ಟದ್ದಲ್ಲ. ಅದು ಕೇವಲ ಅಪೇಕ್ಷಣೀಯ ಮಾತ್ರ.

8. ಸಅ್‌ಯ್ ನಿರ್ವಹಿಸಿದ ಬಳಿಕ ತಲೆಗೂದಲನ್ನು ಬೋಳಿಸಬೇಕು ಅಥವಾ ಗಿಡ್ಡಗೊಳಿಸಬೇಕು. ಪುರುಷರು ತಲೆಗೂದಲು ಬೋಳಿಸುವುದು ಅತ್ಯುತ್ತಮ. ಆದರೆ ಉಮ್ರಃ ಹಜ್ಜ್‌ನೊಂದಿಗೆ ಸೇರಿಕೊಂಡದ್ದಾಗಿದ್ದರೆ ಗಿಡ್ಡಗೊಳಿಸುವುದು ಉತ್ತಮ. ಯಾಕೆಂದರೆ ಇದರಿಂದ ಹಜ್ಜ್ ನಿರ್ವಹಿಸಿದ ಬಳಿಕ ತಲೆಗೂದಲು ಬೋಳಿಸಲು ತಲೆಯಲ್ಲಿ ಕೂದಲು ಉಳಿಯುತ್ತದೆ. ತಲೆಯ ಒಂದು ಭಾಗವನ್ನು ಮಾತ್ರ ಬೋಳಿಸುವುದಾಗಲಿ ಗಿಡ್ಡಗೊಳಿಸುವುದಾಗಲಿ ಮಾಡಬಾರದು. ತಲೆಯನ್ನು ಸಂಪೂರ್ಣ ಬೋಳಿಸಬೇಕು ಅಥವಾ ಗಿಡ್ಡಗೊಳಿಸಬೇಕು.

ಮಹಿಳೆಯರು ಎಲ್ಲ ಜಡೆಗಳಿಂದಲೂ ಒಂದು ಬೆರಳಿನ ತುದಿಯ ಗಾತ್ರದಷ್ಟು ಕತ್ತರಿಸಬೇಕು. ಅಥವಾ ಕೂದಲುಗಳೆಲ್ಲವನ್ನೂ ಒಂದೇ ಜಡೆಯನ್ನಾಗಿ ಮಾಡಿ ಅದರ ತುದಿಯನ್ನು ಒಂದು ಬೆರಳಿನ ತುದಿಯ ಗಾತ್ರದಷ್ಟು ಕತ್ತರಿಸಬೇಕು.

9. ಇಲ್ಲಿಗೆ ಉಮ್ರಃ ಕರ್ಮಗಳು ಮುಗಿಯುತ್ತವೆ. ಇದರೊಂದಿಗೆ ಇಹ್ರಾಮ್‌ನಲ್ಲಿರುವಾಗ ನಿಷಿದ್ಧವಾಗಿದ್ದೆಲ್ಲವೂ ಧರ್ಮಸಮ್ಮತವಾಗುತ್ತವೆ.

## ಹಜ್ಜ್ ನಿರ್ವಹಿಸುವುದು ಹೇಗೆ?

1. ಯೌಮುತ್ತರ್ವಿಯಃ (ದುಲ್‌ಹಿಜ್ಜ 8ನೇ ದಿನ) ನೀವು ಯಾವ ಸ್ಥಳದಲ್ಲಿರುವಿರೋ ಅಲ್ಲಿಂದಲೇ ಹಜ್ಜ್‌ಗಾಗಿ ಇಹ್ರಾಮ್ ಮಾಡುವುದು ಅಪೇಕ್ಷಣೀಯವಾಗಿದೆ. ಇಹ್ರಾಮ್ ಮಾಡುವುದನ್ನು ದುಲ್‌ಹಿಜ್ಜ 9ನೇ ದಿನಕ್ಕೆ ಮುಂದೂಡುವುದಕ್ಕೆ ಅನುಮತಿಯಿದೆ. ಆದರೆ ಹೀಗೆ ಮುಂದೂಡುವುದು ಪ್ರವಾದಿಚರ್ಯೆಗೆ ವಿರುದ್ಧವಾಗಿದೆ. ಸಾಧ್ಯವಾದರೆ ಸ್ನಾನ ಮಾಡಿ, ಸುಗಂಧ ಹಚ್ಚಿ (ದೇಹಕ್ಕೆ ಮಾತ್ರ), ಇಹ್ರಾಮ್‌ನ ಉಡುಪುಗಳನ್ನು ಧರಿಸಿ 'ಲಬ್ಬೈಕ ಹಜ್ಜನ್' ಎನ್ನುತ್ತಾ ಹಜ್ಜ್‌ಗಾಗಿ ನಿಯ್ಯತ್ ಮಾಡಬೇಕು.

2. ನಂತರ ಮಿನಾದೆಡೆಗೆ ತೆರಳಿ ಅಲ್ಲಿ ಝುಹ್ರ್, ಅಸ್ರ್, ಮಗ್ರಿಬ್, ಇಶಾ ಮತ್ತು ಫಜ್ರ್ ನಮಾಝ್‌ಗಳನ್ನು ನಿರ್ವಹಿಸಬೇಕು. ನಾಲ್ಕು ರಕ್‌ಅತ್ ನಮಾಝ್‌ಗಳನ್ನು ಎರಡು ರಕ್‌ಅತ್ ಆಗಿ (ಕಸ್ರ್) ನಿರ್ವಹಿಸಬೇಕು. ಆದರೆ ನಮಾಝ್‌ಗಳನ್ನು ಜಮ್‌ಅ್ ಮಾಡಬಾರದು.

3. ದುಲ್‌ಹಿಜ್ಜಃ 9ನೇ ದಿನದಂದು ಸೂರ್ಯೋದಯವಾದೊಡನೆ ಅರಫಾದೆಡೆಗೆ ಚಲಿಸಬೇಕು. ಸಾಧ್ಯವಾದರೆ 'ನಮಿರಃ'ದಲ್ಲಿ ಮಧ್ಯಾಹ್ನದ ತನಕ ತಂಗುವುದು ಸುನ್ನತ್ತಾಗಿದೆ. ನಂತರ ಝುಹ್ರ್ ಮತ್ತು ಅಸ್ರ್ ನಮಾಝ್‌ಗಳನ್ನು ಒಂದು ಅದಾನ್ ಮತ್ತು ಎರಡು ಇಕಾಮತ್‌ಗಳೊಂದಿಗೆ ಜಮ್‌ಅ್ ತಕ್ದೀಮ್ ಮತ್ತು ಕಸ್ರ್ ಆಗಿ ನಿರ್ವಹಿಸಬೇಕು. (ಜಮ್‌ಅ್ ತಕ್ದೀಮ್ ಎಂದರೆ ಝುಹ್ರ್ ಮತ್ತು ಅಸ್ರ್ ನಮಾಝ್‌ಗಳನ್ನು ಝುಹ್ರ್‌ನ ಸಮಯದಲ್ಲಿ ನಿರ್ವಹಿಸುವುದು).

4. ತಾನು ಅರಫಾತ್‍ನ ಸೀಮೆಯೊಳಗೆ ನಿಂತಿದ್ದೇನೆಂಬುದನ್ನು ಖಾತ್ರಿ ಪಡಿಸಬೇಕು. 'ಬತನ್ ಅರಿನಃ'ದ ಹೊರತು ಇತರೆಲ್ಲ ಸ್ಥಳಗಳೂ ಅರಫದಲ್ಲಿ ಸೇರಿದ್ದು. ಅರಫಃದಲ್ಲಿರುವಾಗ ದುಆ ದಿಕ್ರ್‌ಗಳನ್ನು ಹೆಚ್ಚಿಸಬೇಕು. ಕಿಬ್ಲಃಕ್ಕೆ ಮುಖ ಮಾಡಿ, ಕೈಗಳನ್ನೆತ್ತಿ ಸಂಪೂರ್ಣ ವಿನಮ್ರತೆಯಿಂದ ಅಲ್ಲಾಹನೊಂದಿಗೆ ಹೆಚ್ಚು ಹೆಚ್ಚು ಪ್ರಾರ್ಥಿಸಬೇಕು. ಕುರ್‌ಆನ್ ಪಾರಾಯಣ ಮಾಡುವುದು ಕೂಡ ಉತ್ತಮವಾಗಿದೆ.

5. ಸೂರ್ಯಾಸ್ತವಾದೊಡನೆ ಅರಫಃದಿಂದ ಮುಝ್ದಲಿಫಃದೆಡೆಗೆ ಶಾಂತವಾಗಿ ಮತ್ತು ಗೌರವಭಾವದೊಂದಿಗೆ ಚಲಿಸಬೇಕು. ತಲ್ಬಿಯತ್ ಉಚ್ಛರಿಸುವುದನ್ನು ಹೆಚ್ಚಿಸಬೇಕು. ಇತರ ಮುಸ್ಲಿಮರಿಗೆ ಯಾವುದೇ ತೊಂದರೆ ಕೊಡಬಾರದು. ಮುಝ್ದಲಿಫಃವನ್ನು ತಲುಪಿದರೆ ಅಲ್ಲಿ ಮಗ್ರಿಬ್ ಮತ್ತು ಇಶಾ ನಮಾಝ್‌ಗಳನ್ನು ಒಂದು ಅದಾನ್ ಮತ್ತು ಎರಡು ಇಕಾಮತ್‌ಗಳೊಂದಿಗೆ ಜಮ್‌ಅ್ ಮತ್ತು ಕಸ್ರ್ ಆಗಿ ನಿರ್ವಹಿಸಬೇಕು. ನಂತರ ಫಜ್ರ್ ನಮಾಝ್ ನಿರ್ವಹಿಸುವ ತನಕ ಅಲ್ಲಿಯೇ ತಂಗಬೇಕು. ಫಜ್ರ್ ನಮಾಝ್ ನಿರ್ವಹಿಸಿದ ಬಳಿಕ ಪ್ರಭಾತವು ಬೆಳ್ಳಗೆ ಹೊಳೆಯುವ ತನಕ ಮಶ್‌ಅರುಲ್ ಹರಾಮ್‌ನಲ್ಲಿ ಕಿಬ್ಲಃಕ್ಕೆ ಮುಖ ಮಾಡಿ ಕೈಗಳನ್ನೆತ್ತಿ ಹೆಚ್ಚು ಹೆಚ್ಚು ದಿಕ್ರ್ ಮತ್ತು ದುಆಗಳನ್ನು ಹೇಳಬೇಕು. ಮುಝ್ದಲಿಫಃದ ಯಾವುದೇ ಭಾಗದಲ್ಲಿ ನಿಂತರೂ ಸಾಕು. ಮಹಿಳೆಯರು, ಮಕ್ಕಳು ಮೊದಲಾದ ಬಲಹೀನರಿಗೆ ಅರ್ಧ ರಾತ್ರಿಯ ನಂತರ ಮಿನಾದೆಡೆಗೆ ತೆರಳುವುದಕ್ಕೆ ಅನುಮತಿಯಿದೆ.

6. ನಂತರ ಸೂರ್ಯೋದಯವಾಗುವುದಕ್ಕೆ ಮೊದಲೇ ತಲ್ಬಿಯತ್ ಉಚ್ಛರಿಸುತ್ತಾ ಮಿನಾದೆಡೆಗೆ ತೆರಳಬೇಕು. ತೆರಳುವಾಗ ಹರಳು ಅಥವಾ ಬೀಜದ ಗಾತ್ರದಲ್ಲಿರುವ ಸಣ್ಣ ಸಣ್ಣ ಏಳು ಕಲ್ಲುಗಳನ್ನು ಒಯ್ಯಬೇಕು. ವಾದೀ ಮುಹ್ಸಿರ್ ತಲುಪಿದಾಗ ಸ್ವಲ್ಪ ವೇಗವಾಗಿ ನಡೆಯುವುದು ಅಪೇಕ್ಷಣೀಯವಾಗಿದೆ.

7. ಮಿನಾವನ್ನು ತಲುಪಿದೊಡನೆ ಜಮ್ರತುಲ್ ಅಕಬಃ ದೆಡೆಗೆ ತೆರಳಬೇಕು. ಅಲ್ಲಿಗೆ ತಲುಪಿದೊಡನೆ ತಲ್ಬಿಯತ್ ಉಚ್ಚರಿಸುವುದನ್ನು ನಿಲ್ಲಿಸಬೇಕು. ನಂತರ ಜಮ್ರತುಲ್ ಅಕಬಃಕ್ಕೆ ಏಳು ಕಲ್ಲುಗಳನ್ನು ಒಂದರ ನಂತರ ಒಂದರಂತೆ ಎಸೆಯಬೇಕು. ಪ್ರತಿಯೊಂದು ಎಸೆತದೊಂದಿಗೆ ಅಲ್ಲಾಹು ಅಕ್ಬರ್ ಎನ್ನಬೇಕು. ಸಾಧ್ಯವಾದರೆ ಕಲ್ಲೆಸೆಯುವಾಗ ಕಅ್ಬಃ ಮಂದಿರವು ತನ್ನ ಎಡಭಾಗದಲ್ಲಿ ಮತ್ತು ಮಿನಾ ಬಲಭಾಗದಲ್ಲಿರುವಂತೆ ನಿಲ್ಲುವುದು ಅಪೇಕ್ಷಣೀಯವಾಗಿದೆ.

8. ಕಲ್ಲೆಸೆದ ಬಳಿಕ ಬಲಿಮೃಗವಿದ್ದರೆ ಅದನ್ನು ಬಲಿ ಕೊಡಬೇಕು. ಅದರಿಂದ ಸ್ವಲ್ಪ ತಿನ್ನುವುದು ಮತ್ತು ಬಡವರಿಗೆ ಹಂಚುವುದು ಅಪೇಕ್ಷಣೀಯವಾಗಿದೆ. ಬಲಿ ನೀಡಬೇಕಾದ ಸಮಯವು ಅಯ್ಯಾಮು ತ್ತಶ್ರೀಕ್‌ನ ಮೂರನೇ ದಿನದ (ಅಂದರೆ ದುಲ್‌ಹಿಜ್ಜಃ ತಿಂಗಳ 13ನೇ ದಿನದ) ಸೂರ್ಯಾಸ್ತದ ತನಕ ಇದೆ.

9. ಬಲಿಮೃಗವನ್ನು ಕೊಯ್ದ ಬಳಿಕ ತಲೆಗೂದಲನ್ನು ಬೋಳಿಸಬೇಕು ಅಥವಾ ಗಿಡ್ಡಗೊಳಿಸಬೇಕು. ಬೋಳಿಸುವುದು ಅತ್ಯುತ್ತಮ. ಮಹಿಳೆಯರು ಬೆರಳಿನ ತುದಿಯ ಗಾತ್ರದಷ್ಟು ಕೂದಲನ್ನು ಕತ್ತರಿಸಬೇಕು.

10. ಜಮ್ರಃಕ್ಕೆ ಕಲ್ಲೆಸೆಯುವುದು, ನಂತರ ಬಲಿಮೃಗವನ್ನು ಕೊಯ್ಯುವುದು, ನಂತರ ತಲೆಗೂದಲನ್ನು ಬೋಳಿಸುವುದು, ಹೀಗೆ ಕ್ರಮಪ್ರಕಾರ ಮಾಡುವುದು ಅತ್ಯುತ್ತಮ. ಆದರೆ ಇದನ್ನು ಕ್ರಮತಪ್ಪಿ ನಿರ್ವಹಿಸಿದರೆ ಅದರಲ್ಲೇನೂ ತೊಂದರೆಯಿಲ್ಲ.

11. ಜಮ್ರಃಕ್ಕೆ ಕಲ್ಲೆಸೆದು, ಬಲಿಮೃಗವನ್ನು ಕೊಯ್ದು, ತಲೆಗೂದಲನ್ನು ಬೋಳಿಸುವುದು ಅಥವಾ ಗಿಡ್ಡಗೊಳಿಸುವುದನ್ನು ಮಾಡಿದ ನಂತರ ಇಹ್ರಾಮ್‌ನ ಎಲ್ಲ ನಿಷಿದ್ಧಗಳೂ ಧರ್ಮಸಮ್ಮತವಾಗುತ್ತವೆ. ಆದರೆ ಪತ್ನಿಯರನ್ನು ಸಮೀಪಿಸುವುದರ ಹೊರತು. ಇದನ್ನು ಮೊದಲ ವಿಮುಕ್ತಿ

(ಅತ್ತಹಲ್ಲುಲುಲ್ ಅವ್ವಲ್) ಎನ್ನಲಾಗುತ್ತದೆ. ಇದರ ನಂತರ ಸುಗಂಧವನ್ನು ಹಚ್ಚಿ ಮಕ್ಕಾದೆಡೆಗೆ ತೆರಳುವುದು ಸುನ್ನತ್ತಾಗಿದೆ.

12. ಮಕ್ಕಾವನ್ನು ತಲುಪಿದೊಡನೆ 'ತವಾಫುಲ್ ಇಫಾದಃ' ನಿರ್ವಹಿಸಬೇಕು. ಇದನ್ನು 'ತವಾಫು ಝ್ಝಿಯಾರಃ' ಎಂದೂ ಕರೆಯಲಾಗುತ್ತದೆ. ತವಾಫ್‌ನ ನಂತರ ಸಾಧ್ಯವಾದರೆ ಮಕಾಮ್ ಇಬ್ರಾಹೀಮ್‌ನ ಹಿಂದೆ ಎರಡು ರಕ್‌ಅತ್ ನಮಾಝ್ ನಿರ್ವಹಿಸಬೇಕು. ಸಾಧ್ಯವಾಗದಿದ್ದರೆ ಮಸೀದಿಯ ಯಾವುದೇ ಭಾಗದಲ್ಲೂ ನಿರ್ವಹಿಸಬಹುದು.

13. ತವಾಫುಲ್ ಇಫಾದಃ ನಿರ್ವಹಿಸಿದ ಬಳಿಕ ಮಿನಾಗೆ ಮರಳಿ ಅಲ್ಲಿ ಅಯ್ಯಾಮು ತ್ತಶ್ರೀಕ್‌ಗಳನ್ನು (ದುಲ್‌ಹಿಜ್ಜಃ 11, 12 ಮತ್ತು 13ನೇ ದಿನಗಳನ್ನು) ಕಳೆಯಬೇಕು. ಎರಡು ದಿನದಲ್ಲೇ ಆತುರಪಟ್ಟು ಮಿನಾ ಬಿಡುವುದಾದರೆ ಅದರಲ್ಲಿ ತೊಂದರೆಯಿಲ್ಲ.

14. ಅಯ್ಯಾಮು ತ್ತಶ್ರೀಕ್‌ನ ದಿನಗಳಲ್ಲಿ (ದುಲ್‌ಹಿಜ್ಜ 11, 12 ಮತ್ತು 13ನೇ ದಿನಗಳಲ್ಲಿ) ಪ್ರತಿದಿನ ಮಧ್ಯಾಹ್ನದ ನಂತರ ಮೂರು ಜಮ್ರಃಗಳಿಗೂ ಕಲ್ಲೆಸೆಯಬೇಕು. ಚಿಕ್ಕ ಜಮ್ರಃದಿಂದ, ಅಂದರೆ ಮಿನಾಗೆ ಹತ್ತಿರದಲ್ಲಿರುವ ಜಮ್ರಃದಿಂದ ತೊಡಗಿ, ಮಧ್ಯದ ಜಮ್ರಃ ಮತ್ತು ಕೊನೆಗೆ ಜಮ್ರತುಲ್ ಅಕಬಃಕ್ಕೆ ಏಳು ಹರಳುಗಲ್ಲುಗಳನ್ನು ಒಂದರ ನಂತರ ಒಂದರಂತೆ ಅಲ್ಲಾಹು ಅಕ್ಬರ್ ಎನ್ನುತ್ತಾ ಎಸೆಯಬೇಕು. ಕಲ್ಲುಗಳು ಜಮ್ರಃದ ಬುಡಕ್ಕೆ ಬೀಳುವಂತೆ ನೋಡಿಕೊಳ್ಳಬೇಕು. ಮೊದಲನೆ ಜಮ್ರಃಕ್ಕೆ ಕಲ್ಲೆಸೆದ ಬಳಿಕ ಮತ್ತು ಎರಡನೆ ಜಮ್ರಃಕ್ಕೆ ಕಲ್ಲೆಸೆದ ಬಳಿಕ ಅಲ್ಲಾಹನೊಂದಿಗೆ ದೀರ್ಘವಾಗಿ ಪ್ರಾರ್ಥಿಸುವುದು ಸುನ್ನತ್ತಾಗಿದೆ.

15. ದುಲ್‌ಹಿಜ್ಜಃ 12ನೇ ದಿನದಂದು ಮಧ್ಯಾಹ್ನದ ನಂತರ ಜಮ್ರಃಗಳಿಗೆ ಕಲ್ಲೆಸೆದ ಬಳಿಕ ಸೂರ್ಯಾಸ್ತವಾಗುವುದಕ್ಕೆ ಮುಂಚೆ ಮಿನಾ ಬಿಟ್ಟು

ತೆರಳುವುದಕ್ಕೆ ಅನುಮತಿಯಿದೆ. ಮಿನಾ ಬಿಟ್ಟು ತೆರಳುವುದಿಲ್ಲವಾದರೆ 13ನೇ ದಿನವೂ ಜಮ್ರಃಗಳಿಗೆ ಕಲ್ಲೆಸೆಯಬೇಕಾಗುತ್ತದೆ. 13ನೇ ದಿನವೂ ಕಲ್ಲೆಸೆಯುವುದಕ್ಕಾಗಿ ಮಿನಾದಲ್ಲಿ ತಂಗುವುದು ಅತ್ಯುತ್ತಮ.

ಜಮ್ರಃಗಳಿಗೆ ಕಲ್ಲೆಸೆಯುವುದು ಮಧ್ಯಾಹ್ನದ ನಂತರವಾಗಿರಬೇಕು.

16. ಹಜ್ಜ್ ಕರ್ಮಗಳನ್ನು ಮುಗಿಸಿದ ಬಳಿಕ ಊರಿಗೆ ತೆರಳಲು ಇಚ್ಛಿಸುವುದಾದರೆ ಕಅ್‌ಬಾಲಯಕ್ಕೆ ತೆರಳಿ ತವಾಫುಲ್ ವಿದಾಅ್ (ವಿದಾಯದ ತವಾಫ್) ನಿರ್ವಹಿಸುವುದು ಕಡ್ಡಾಯ. ಅಂದರೆ ಕಅ್‌ಬಾಲಯಕ್ಕೆ ಏಳು ಪ್ರದಕ್ಷಿಣೆಗಳನ್ನು ಹಾಕಿ ತರುವಾಯ ಮಕಾಮ್ ಇಬ್ರಾಹೀಮ್‌ನ ಹಿಂದೆ ಎರಡು ರಕ್‌ಅತ್ ನಮಾಝ್ ನಿರ್ವಹಿಸಬೇಕು. ಆದರೆ ಋತುಸ್ರಾವವಿರುವವರಿಗೆ ಮತ್ತು ಹೆರಿಗೆ ರಕ್ತವಿರುವವರಿಗೆ ಈ ತವಾಫನ್ನು ನಿರ್ವಹಿಸುವುದು ಕಡ್ಡಾಯವಿಲ್ಲ. ಅವರು ಇದನ್ನು ನಿರ್ವಹಿಸದೆಯೇ ಊರಿಗೆ ತೆರಳಬಹುದು.

## ಹಜ್ಜ್ ಮತ್ತು ಉಮ್ರಃ ನಿರ್ವಹಿಸುವವರಿಗೆ ಕೆಲವು ನಿರ್ದೇಶನಗಳು

ಸಹೋದರ ಸಹೋದರಿಯರೇ, ಹಜ್ಜ್ ಮತ್ತು ಉಮ್ರಃ ನಿರ್ವಹಿಸುವವರು, ಅವರ ಇಬಾದತ್‌ಗಳು ಸಿಂಧುವಾಗುವುದಕ್ಕಾಗಿ, ಅಗತ್ಯವಾಗಿ ಅರಿತಿರಬೇಕಾದ, ಎಚ್ಚರ ವಹಿಸಬೇಕಾದ ಮತ್ತು ನಿರ್ವಹಿಸಬೇಕಾದ ಕೆಲವು ವಿಷಯಗಳನ್ನು ನಾವಿಲ್ಲಿ ನೀಡುತ್ತಿದ್ದೇವೆ.

1. ನಿಯ್ಯತ್ತನ್ನು ಅಲ್ಲಾಹನಿಗೆ ಮಾತ್ರ ನಿಷ್ಕಳಂಕಗೊಳಿಸಬೇಕು. ಅವನಲ್ಲಿರುವುದನ್ನು ಮಾತ್ರ ಆಶಿಸಬೇಕು. ತೋರಿಕೆ ಮತ್ತು ಜನಮನ್ನಣೆಯನ್ನು ವರ್ಜಿಸಬೇಕು.

2. ಅಲ್ಲಾಹನಿಗೆ ಸಂಪೂರ್ಣ ಶರಣಾಗಿ, ವಿನಮ್ರವಾಗಿ ಸರ್ವ ಪಾಪ ಮತ್ತು ದೋಷಗಳ ಬಗ್ಗೆ ಅವನೊಂದಿಗೆ ಪ್ರಾಮಾಣಿಕವಾಗಿ ಕ್ಷಮೆಯನ್ನು ಬೇಡಬೇಕು.

3. ಅಲ್ಲಾಹನ ಧರ್ಮದ ಬಗ್ಗೆ ಪಾಂಡಿತ್ಯವನ್ನು ಪಡೆಯಬೇಕು. ಹಜ್ಜ್ ಮತ್ತು ಉಮ್ರಃದಲ್ಲಿ ಏನೆಲ್ಲ ನಿರ್ವಹಿಸಬೇಕೆಂಬುದನ್ನು ಕಲಿಯಬೇಕು ಮತ್ತು ಸಂಶಯವುಂಟಾದರೆ ಅರಿವುಳ್ಳವರೊಂದಿಗೆ ಕೇಳಬೇಕು.

4. ಅಲ್ಲಾಹನಿಗೆ ಕೋಪವನ್ನುಂಟು ಮಾಡುವ ವಿಷಯಗಳನ್ನು ಮಾಡದಂತೆ ನಾಲಗೆ ಮತ್ತು ಅಂಗಾಂಗಗಳನ್ನು ಹತೋಟಿಯಲ್ಲಿಡಬೇಕು.

5. ದಿಕ್ರ್, ದುಆ, ಇಸ್ತಿಗ್ಫಾರ್, ತಲ್ಬಿಯತ್, ಸತ್ಕರ್ಮಗಳು ಮೊದಲಾದವುಗಳನ್ನು ಹೆಚ್ಚಿಸಬೇಕು. ಯಾಕೆಂದರೆ ನೀವು ತೆರಳುವ ಸ್ಥಳಗಳು ಪ್ರತಿಫಲವನ್ನು ಇಮ್ಮಡಿಗೊಳಿಸುವ ಸ್ಥಳಗಳಾಗಿವೆ.

6. ಮೀಕಾತ್‌ನ ಸ್ಥಳವನ್ನು ತಲುಪಿದರೆ ಇಫ್ರಾದ್, ತಮತ್ತುಅ್, ಕಿರಾನ್ ಮೊದಲಾಡ ಹಜ್ಜ್‌ನ ವಿಧಗಳಲ್ಲಿ ಯಾವುದಾದರೊಂದು ವಿಧವನ್ನು ಆರಿಸಬೇಕು. ಹಜ್ಜ್ ಅಥವಾ ಉಮ್ರಃ ನಿರ್ವಹಿಸಲು ಹೋಗುವಾಗ ಇಹ್ರಾಮ್ ಮಾಡದೆ ಮೀಕಾತ್‌ಗಳನ್ನು ದಾಟುವುದು ನಿಷಿದ್ಧವಾಗಿದೆ.

7. ವಾಯು ಮಾರ್ಗದಲ್ಲಿ ತೆರಳುವುದಾದರೆ ವಿಮಾನವು ಮೀಕಾತ್‌ನ ಸ್ಥಳಕ್ಕೆ ಸಮಾನಾಂತರದಲ್ಲಿರುವಾಗ ಇಹ್ರಾಮ್ ಮಾಡಬೇಕು.

8. ನಿಮ್ಮ ಮನೆಯು ಮೀಕಾತ್‌ಗಳ ಒಳಭಾಗದಲ್ಲಿದ್ದರೆ ನೀವಿರುವ ಸ್ಥಳದಿಂದಲೇ ಇಹ್ರಾಮ್ ಮಾಡಬಹುದು. ಇಹ್ರಾಮ್ ಮಾಡುವುದಕ್ಕಾಗಿ ಮೀಕಾತ್‌ಗೆ ಹೋಗಬೇಕಾದುದು ಅನಿವಾರ್ಯವಲ್ಲ.

9. ಹಜ್ಜ್ ಕರ್ಮಗಳನ್ನು ನಿರ್ವಹಿಸಲು ಸಾಧ್ಯವಾಗದೆಂದು ನೀವು ಭಯಪಟ್ಟರೆ, ಇಹ್ರಾಮ್ ಮಾಡುವಾಗಲೇ ಈ ಷರತ್ತನ್ನು ಸೇರಿಸಿಕೊಳ್ಳಿ. ಅಂದರೆ ಇಹ್ರಾಮ್ ಮಾಡುವಾಗ "ಇನ್ ಹಬಸನೀ ಹಾಬಿಸುನ್ ಫಮಹಿಲ್ಲೀ ಹೈಸು ಹಬಸ್ತನೀ" ಎಂದು ಹೇಳಿ. ನಿಮಗೆ ಹಜ್ಜ್ ಕರ್ಮ ನಿರ್ವಹಿಸಲು ಸಾಧ್ಯವಾಗದಂತಹ ಅಡ್ಡಿ ಎದುರಾದರೆ ನಿಮಗೆ ಇಹ್ರಾಮ್‌ನಿಂದ ಮುಕ್ತರಾಗಬಹುದು. ನೀವು ಪ್ರಾಯಶ್ಚಿತ್ತವಾಗಿ ಏನೂ ನೀಡಬೇಕಾಗಿಲ್ಲ.

10. ಇಝಾರನ್ನು (ಲುಂಗಿ ಮೊದಲಾದ ಉಡುಪು) ನೂಲಿನಿಂದ ಸೊಂಟಕ್ಕೆ ಕಟ್ಟುವುದು, ಹಣವನ್ನು ಭದ್ರವಾಗಿಡುವುದಕ್ಕೆ ಪರ್ಸ್ ಇರುವ ಬೆಲ್ಟ್ ಧರಿಸುವುದು, ಉಂಗುರ, ವಾಚು, ಕನ್ನಡಕ ಧರಿಸುವುದು, ಕಿವಿ ಕೇಳದವರು ಶ್ರವಣ ಸಾಧನ ಧರಿಸುವುದು ಮೊದಲಾದವುಗಳಿಗೆ ಅನುಮತಿಯಿದೆ.

11. ಇಹ್ರಾಮ್ ಮಾಡುವಾಗ ಇಝಾರ್ ಸಿಗದಿದ್ದರೆ ಪ್ಯಾಂಟ್ ಧರಿಸುವುದಕ್ಕೆ ಮತ್ತು ಚಪ್ಪಲಿ ಸಿಗದಿದ್ದರೆ ಶೂ ಧರಿಸುವುದಕ್ಕೆ ಅನುಮತಿಯಿದೆ.

12. ಮಹಿಳೆಯರು ಯಾವುದೇ ಉಡುಪನ್ನೂ ಧರಿಸಿ ಇಹ್ರಾಮ್ ಮಾಡಬಹುದು. ಆದರೆ ಅದು ಪುರುಷರನ್ನು ಹೋಲುವ ಉಡುಪಾಗಿರಬಾರದು. ಅದೇ ರೀತಿ ಇತರರನ್ನು ಆಕರ್ಷಿಸುವ ಮತ್ತು ಮೈಮಾಟವನ್ನು ಪ್ರದರ್ಶಿಸುವ ಉಡುಪಾಗಿರಬಾರದು.

13. ಅನ್ಯ ಪುರುಷರು ನೋಡುವರೆಂಬ ಭಯವಿದ್ದರೆ ಮಹಿಳೆಯರು ಶಾಲನ್ನು ಮುಖದ ಮೇಲೆ ಹಾಕವುದು ಕಡ್ಡಾಯವಾಗಿದೆ.

14. ಇಹ್ರಾಮ್‌ನ ಸಂದರ್ಭದಲ್ಲಿ ಕಾಲಿಗೆ ಸಾಕ್ಸ್ ಧರಿಸಲು ಮಹಿಳೆಯರಿಗೆ ಅನುಮತಿಯಿದೆ. ಅದನ್ನು ಕಳಚಲೂ ಅನುಮತಿಯಿದೆ. ಅದು ಇಹ್ರಾಮ್‌ನ ಮೇಲೆ ಯಾವುದೇ ಪರಿಣಾಮವನ್ನೂ ಬೀರುವುದಿಲ್ಲ.

15. ತಮತ್ತುಅ್ ಆಗಿ ಹಜ್ಜ್ ನಿರ್ವಹಿಸುವ ಮಹಿಳೆ ಉಮ್ರಃದ ತವಾಫ್ ಮಾಡುವುದಕ್ಕೆ ಮುಂಚೆ ಋತುಸ್ರಾವಕ್ಕೊಳಗಾಗಿ ಹಜ್ಜ್ ನಷ್ಟವಾಗಬಹುದೆಂದು ಭಯಪಟ್ಟರೆ ಆಕೆ ಕಿರಾನ್ ಆಗಿ ಹಜ್ಜ್ ನಿರ್ವಹಿಸಬೇಕು.

16. ಸ್ನಾನ ಮಾಡಲು ಮತ್ತು ತಲೆಯನ್ನು ತೊಳೆಯಲು ಇಹ್ರಾಮ್‌ನಲ್ಲಿರುವವರಿಗೆ ಅನುಮತಿಯಿದೆ.

17. ಇಹ್ರಾಮ್‌ನಲ್ಲಿರುವಾಗ ಇಹ್ರಾಮ್‌ನ ಉಡುಪುಗಳನ್ನು ತೊಳೆಯಲು ಮತ್ತು ಇಹ್ರಾಮ್‌ನ ಬೇರೊಂದು ಉಡುಪನ್ನು ಧರಿಸಲು ಅನುಮತಿಯಿದೆ.

18. ಕಾರು, ಕೊಡೆ, ಗುಡಾರ, ಮರ ಮೊದಲಾದವುಗಳ ನೆರಳಿನಲ್ಲಿ ನಿಲ್ಲಲು ಇಹ್ರಾಮ್‌ನಲ್ಲಿರುವವರಿಗೆ ಅನುಮತಿಯಿದೆ. ಅಗತ್ಯ ಬಂದರೆ ಸಾಮಾನುಗಳನ್ನು ತಲೆಯ ಮೇಲೆ ಹೊರಲು ಕೂಡ ಅನುಮತಿಯಿದೆ.

19. ಜನದಟ್ಟಣೆಯಿರುವಾಗ ಝಮ್ ಝಮ್ ಬಾವಿಯ ಹಿಂಭಾಗದಿಂದ ಮತ್ತು ಮಕಾಮ್ ಇಬ್ರಾಹೀಮ್‌ನ ಹಿಂಭಾಗದಿಂದ ತವಾಫ್ ಮಾಡಲು ಅನುಮತಿಯಿದೆ. ಮಸೀದಿಯು ಸಂಪೂರ್ಣವಾಗಿ ತವಾಫ್ ಮಾಡುವುದಕ್ಕಿರುವ ಸ್ಥಳವಾಗಿದೆ.

20. ಕಅ್‌ಬಾಲಯಕ್ಕೆ ಹಗಲಿನ ವೇಳೆ ಆಗಮಿಸಿದವರು ತವಾಫ್ ಮತ್ತು ಸಅ್‌ಯನ್ನು ರಾತ್ರಿಯ ತನಕ ಮುಂದೂಡಲು ಅನುಮತಿಯಿದೆ. ಹಾಗೆಯೇ ರಾತ್ರಿ ವೇಳೆ ಆಗಮಿಸಿದವರು ಅವುಗಳನ್ನು ಹಗಲಿನ ತನಕ ಮುಂದೂಡಲು ಅನುಮತಿಯಿದೆ.

21. ಕಅ್‌ಬಾಲಯಕ್ಕೆ ಎಷ್ಟು ಸಲ ಪ್ರದಕ್ಷಿಣೆ ಮಾಡಿದ್ದೇನೆಂದು ಸಂಶಯವಾದರೆ, ಅಥವಾ ಸಫಾ ಮರ್ವಾಗಳ ಮಧ್ಯೆ ಎಷ್ಟು ಸಲ ಪ್ರದಕ್ಷಿಣೆ ಮಾಡಿದ್ದೇನೆಂದು ಸಂಶಯವಾದರೆ, ಖಾತ್ರಿಯಿರುವ ಸಂಖ್ಯೆಯನ್ನು ಅನುಸರಿಸಬೇಕು. ಉದಾಹರಣೆಗೆ, ಪ್ರದಕ್ಷಿಣೆ ಮಾಡಿದ್ದು ಮೂರು ಬಾರಿಯೋ ಅಥವಾ ನಾಲ್ಕು ಬಾರಿಯೋ ಎಂದು ಸಂಶಯವಾದರೆ ಅದನ್ನು ಮೂರು ಬಾರಿ ಎಂದು ಪರಿಗಣಿಸಬೇಕು.

22. ತವಾಫ್ ಅಥವಾ ಸಅ್‌ಯ್ ಮಾಡುವಾಗ ದಣಿವಾದರೆ ಸ್ವಲ್ಪ ಹೊತ್ತು ಕುಳಿತು ಆರಾಮ ಪಡೆದು, ನಂತರ ಅದನ್ನು ನಡೆಯುತ್ತಲೋ, ಅಥವಾ ಗಾಡಿಯಲ್ಲಿ ಕುಳಿತೋ ಪೂರ್ತಿ ಮಾಡಲು ಅನುಮತಿಯಿದೆ.

23. ತವಾಫ್ ನಿರ್ವಹಿಸಿದ ಬಳಿಕ ತಡ ಮಾಡದೆ ಸಅ್‌ಯ್ ನಿರ್ವಹಿಸುವುದು ಅತ್ಯುತ್ತಮ. ಆದರೆ ಅದನ್ನು ತಡ ಮಾಡಿದರೆ ತೊಂದರೆಯಿಲ್ಲ. ಉದಾಹರಣೆಗೆ ಬೆಳಗ್ಗೆ ತವಾಫ್ ಮಾಡಿದರೆ ಸಂಜೆ ಸಅ್‌ಯ್ ನಿರ್ವಹಿಸುವುದರಲ್ಲಿ ತೊಂದರೆಯಿಲ್ಲ.

24. ಬಲಿ ಮೃಗವನ್ನು ತರದವರು ಮೂರು ದಿನ ಉಪವಾಸ ಆಚರಿಸುವುದನ್ನು ಅರಫಃ ದಿನಕ್ಕೆ ಮೊದಲೇ ನಿರ್ವಹಿಸುವುದು ಅತ್ಯುತ್ತಮ. ಯಾಕೆಂದರೆ ಅರಫಃ ದಿನದಂದು ಹಾಜಿ ಉಪವಾಸ ಆಚರಿಸಬಾರದು. ಯಾಕೆಂದರೆ ಅರಫಃದಲ್ಲಿರುವವರು ಅರಫಃ ದಿನದಂದು ಉಪವಾಸ ಆಚರಿಸುವುದನ್ನು ಪ್ರವಾದಿ(ﷺ)ರವರು ವಿರೋಧಿಸಿದ್ದಾರೆ. ಯಾಕೆಂದರೆ

ಅರಫಃ ದಿನದಂದು ದಿಕ್ರ್ ಮತ್ತು ದುಆಗಳಲ್ಲಿ ನಿರತರಾಗಲು ಇದು ಶಕ್ತಿಯನ್ನು ನೀಡುತ್ತದೆ.

25.ಮೂರು ದಿನಗಳ ಉಪವಾಸವನ್ನು ಮತ್ತು ಏಳು ದಿನಗಳ ಉಪವಾಸವನ್ನು ನಿರಂತರವಾಗಿ ಅಥವಾ ಬೇರೆ ಬೇರೆಯಾಗಿ ಆಚರಿಸಬಹುದು.

26. ತಮತ್ತುಅ್ ಆಗಿ ಹಜ್ಜ್ ನಿರ್ವಹಿಸುವವರಿಗೆ ಉಮ್ರಃ ನಿರ್ವಹಿಸಿದ ಬಳಿಕ ಪತ್ನಿಯರು ಸೇರಿದಂತೆ ಇಹ್ರಾಮ್‌ನಲ್ಲಿ ನಿಷಿದ್ಧವಾಗಿದ್ದ ಎಲ್ಲವೂ ಧರ್ಮಸಮ್ಮತವಾಗುತ್ತವೆ.

27.ಯೌಮು ತ್ತರ್ವಿಯಃ (ದುಲ್‌ಹಿಜ್ಜಃ 8ನೇ ದಿನ) ಹಾಜಿ ತಾನು ಇರುವ ಸ್ಥಳದಿಂದಲೇ ಹಜ್ಜ್‌ಗಾಗಿ ಇಹ್ರಾಮ್ ಮಾಡಬೇಕು. ಮಕ್ಕಾದೊಳಗಿಂದಲೇ, ಅಥವಾ ಮಸ್ಜಿದುಲ್ ಹರಾಮ್‌ನಿಂದಲೇ ಅಥವಾ ಮೀಝಾಬ್‌ನ ಕೆಳಗಿನಿಂದಲೇ ಇಹ್ರಾಮ್ ಮಾಡುವುದು ಕಡ್ಡಾಯವಿಲ್ಲ. ಮಿನಾ ಅಥವಾ ಅರಫಾತ್‌ಗೆ ಹೋಗುವಾಗ ತವಾಫುಲ್ ವಿದಾಅ್ ನಿರ್ವಹಿಸುವುದು ಕಡ್ಡಾಯವಿಲ್ಲ.

28.ದುಲ್‌ಹಿಜ್ಜಃ ಒಂಬತ್ತನೇ ದಿನದಂದು ಹಾಜಿ ಮಿನಾದಿಂದ ಅರಫಃಕ್ಕೆ ಹೋಗುವುದು ಸೂರ್ಯೋದಯದ ಬಳಿಕವಾಗಿರುವುದು ಅತ್ಯುತ್ತಮ.

29.ಅರಫಃದಲ್ಲಿ ನಿಲ್ಲುವ ಸಮಯವು ಈದ್ ದಿನದ (ದುಲ್‌ಹಿಜ್ಜಃ 10ನೇ ದಿನದ) ಪ್ರಭಾತೋದಯದ ತನಕ ಇದೆ.

30.ಹಾಜಿ ಮಗ್ರಿಬ್ ಮತ್ತು ಇಶಾ ನಮಾಝ್‌ಗಳನ್ನು ಮುಝ್ದಲಿಫಃಕ್ಕೆ ತಲುಪಿದ ಬಳಿಕ ನಿರ್ವಹಿಸಬೇಕು. ಅದು ಮಗ್ರಿಬ್ ನಮಾಝ್‌ನ ಸಮಯದಲ್ಲೋ ಅಥವಾ ಇಶಾ ನಮಾಝ್‌ನ ಸಮಯದಲ್ಲೋ ಆಗಬಹುದು.

31. ಜಮ್ರಃಕ್ಕೆ ಎಸೆಯುವ ಕಲ್ಲುಗಳನ್ನು ಮುಝ್ದಲಿಫಃದಿಂದ ಅಥವಾ ಮಿನಾದಿಂದ ಅಥವಾ ಇತರ ಯಾವುದೇ ಸ್ಥಳಗಳಿಂದ ಹೆಕ್ಕಬಹುದು.

32.ಮಹಿಳೆಯರು, ಮಕ್ಕಳು ಮೊದಲಾದ ಬಲಹೀನರಿಗೆ ಅರ್ಧ ರಾತ್ರಿಯ ಬಳಿಕ ಮುಝ್ದಲಿಫಃದಿಂದ ತೆರಳಲು ಅನುಮತಿಯಿದೆ.

33. ಮಕ್ಕಳಿಗೆ ಕಲ್ಲೆಸೆಯಲು ಸಾಧ್ಯವಾಗದಿದ್ದರೆ ಅವರ ಪರವಾಗಿ ಅವರ ಪೋಷಕರು ಕಲ್ಲೆಸೆಯುವುದಕ್ಕೆ ಅನುಮತಿಯಿದೆ.

34.ರೋಗಿಗಳು, ವಯೋವೃದ್ಧರು, ಗರ್ಭಿಣಿಯರು ಮೊದಲಾದವರಿಗೆ ಕಲ್ಲೆಸೆಯಲು ಸಾಧ್ಯವಾಗದಿದ್ದರೆ ಅವರ ಪರವಾಗಿ ಕಲ್ಲೆಸೆಯಲು ಇನ್ನೊಬ್ಬರಿಗೆ ವಹಿಸಿಕೊಡಬಹುದು.

35.ಕಲ್ಲೆಸೆಯುವುದನ್ನು ವಹಿಸಿಕೊಡಲಾದ ವ್ಯಕ್ತಿಯು ಪ್ರತಿಯೊಂದು ಜಮ್ರಃಕ್ಕೆ ತನ್ನ ಪರವಾಗಿ ಕಲ್ಲೆಸೆದ ಬಳಿಕ ಅದೇ ಸ್ಥಳದಿಂದ ಇನ್ನೊಬ್ಬರ ಪರವಾಗಿ ಕಲ್ಲೆಸೆಯುವುದಕ್ಕೆ ಅನುಮತಿಯಿದೆ. ತನ್ನ ಪರವಾಗಿ ಕಲ್ಲೆಸೆದು ಮರಳಿ ಬಂದು ನಂತರ ಪುನಃ ಹೋಗಿ ಇನ್ನೊಬ್ಬರ ಪರವಾಗಿ ಕಲ್ಲೆಸೆಯುವುದು ಕಡ್ಡಾಯವಲ್ಲ.

36.ಹಗಲಿನ ವೇಳೆ ಕಲ್ಲೆಸೆಯಲು ಸಾಧ್ಯವಾಗದವರಿಗೆ ರಾತ್ರಿ ವೇಳೆಯಲ್ಲಿ ಕಲ್ಲೆಸೆಯಲು ಅನುಮತಿಯಿದೆ. ಇಂದು ಕಲ್ಲೆಸೆಯಲು ಸಾಧ್ಯವಾಗದವರು ನಾಳೆ ಮಧ್ಯಾಹ್ನದ ಬಳಿಕ ಇಂದಿನ ದಿನದ ಕಲ್ಲನ್ನು ಎಸೆದು ತರುವಾಯ ನಾಳೆಯ ದಿನದ ಕಲ್ಲನ್ನು ಎಸೆಯಲು ಅನುಮತಿಯಿದೆ.

37.ಜಮ್ರಃಕ್ಕೆ ಯಾವ ದಿಕ್ಕಿನಿಂದಲೂ ಕಲ್ಲೆಸೆಯಬಹುದು. ಆದರೆ ಕಲ್ಲು ಜಮ್ರಃದ ಒಳಗೇ ಬೀಳುವುದನ್ನು ಖಾತ್ರಿಪಡಿಸಬೇಕು. ಆದರೆ ಕಲ್ಲು ಅದರೊಳಗೇ ನಿಲ್ಲಬೇಕೆಂಬ ಶರತ್ತಿಲ್ಲ. ಕಲ್ಲು ಅದರೊಳಗೆ ಬಿದ್ದು ಹೊರ ಬಂದರೂ ಪರವಾಗಿಲ್ಲ.

38. ಈದ್ ದಿನದಂದು (ದುಲ್‌ಹಿಜ್ಜ 10ರಂದು) ಇವುಗಳನ್ನು ಕ್ರಮ ಪ್ರಕಾರ ನಿರ್ವಹಿಸುವುದು ಸುನ್ನತ್ತಾಗಿದೆ: ಜಮ್ರತುಲ್ ಅಕಬಃಕ್ಕೆ ಕಲ್ಲೆಸೆಯುವುದು, ನಂತರ ಬಲಿಮೃಗವಿದ್ದರೆ ಅದನ್ನು ಬಲಿ ಕೊಡುವುದು, ನಂತರ ತಲೆಗೂದಲನ್ನು ಬೋಳಿಸುವುದು ಅಥವಾ ಗಿಡ್ಡಗೊಳಿಸುವುದು. ಬೋಳಿಸುವುದು ಅತ್ಯುತ್ತಮ. ನಂತರ ಕಅ್‌ಬಾಲಯಕ್ಕೆ ತವಾಫ್ ನಿರ್ವಹಿಸುವುದು. ಆದರೆ ಇವುಗಳನ್ನು ಕ್ರಮ ತಪ್ಪಿ ನಿರ್ವಹಿಸಿದರೂ ತೊಂದರೆಯಿಲ್ಲ.

39. ತವಾಫುಲ್ ಇಫಾದಃ ಮತ್ತು ಸಅ್‌ಯನ್ನು ಈದ್ ದಿನದ ನಂತರಕ್ಕೆ ಮುಂದೂಡಲು ಅನುಮತಿಯಿದೆ. ಆದರೆ ಅದನ್ನು ದುಲ್‌ಹಿಜ್ಜಃ ತಿಂಗಳೊಳಗೇ ನಿರ್ವಹಿಸುವುದು ಅತ್ಯುತ್ತಮ.

40. ಬಲಿ ಮೃಗವನ್ನು ಬಲಿ ಕೊಡುವ ಸಮಯವು ದುಲ್‌ಹಿಜ್ಜಃ 13ನೇ ದಿನದ (ಅಯ್ಯಾಮು ತ್ತಶ್ರೀಕಿನ ಕೊನೆಯ ದಿನದ) ಸೂರ್ಯಾಸ್ತದ ತನಕ ಇದೆ. ಆದ್ದರಿಂದ ಬಲಿ ಕೊಡುವ ಅವಧಿಯು ನಾಲ್ಕು ದಿನಗಳ ಕಾಲ ಇದೆ. ಈದ್ ದಿನ ಮತ್ತು ಅದರ ನಂತರದ ಮೂರು ದಿನಗಳು.

41. ಇಹ್ರಾಮ್‌ನಲ್ಲಿರುವ ವ್ಯಕ್ತಿಗೆ ಇಹ್ರಾಮ್‌ನಿಂದ ವಿಮುಕ್ತ ನಾಗುವುದಕ್ಕೆ ಮುಂಚೆಯೇ ಇನ್ನೊಬ್ಬರ ತಲೆಯನ್ನು ಬೋಳಿಸಲು ಅಥವಾ ಗಿಡ್ಡಗೊಳಿಸಲು ಅನುಮತಿಯಿದೆ.

42. ತಲೆ ಬೋಳಿಸುವುದು ಅಥವಾ ಗಿಡ್ಡಗೊಳಿಸುವುದನ್ನು ಯಾವುದೇ ಸ್ಥಳದಲ್ಲೂ ಮಾಡಬಹುದು. ಅದಕ್ಕೊಂದು ನಿಶ್ಚಿತ ಸ್ಥಳ ಎಂಬುದಿಲ್ಲ.

43. ಋತುಸ್ರಾವವಿರುವ ಮತ್ತು ಹೆರಿಗೆ ರಕ್ತವಿರುವ ಮಹಿಳೆಯರು ತವಾಫುಲ್ ವಿದಾಅ್ ನಿರ್ವಹಿಸಬೇಕಾಗಿಲ್ಲ.

44.ಯಾತ್ರೆ ಕೈಗೊಳ್ಳುವಾಗ ತವಾಫುಲ್ ವಿದಾಅ್‌ನ ನಿಯ್ಯತ್ತಿನೊಂದಿಗೆ ತವಾಫುಲ್ ಇಫಾದಃ ನಿರ್ವಹಿಸಿದರೆ ಅದು ಸಾಕಾಗುತ್ತದೆ.

45.ತವಾಫುಲ್ ವಿದಾಅ್ ನಿರ್ವಹಿಸಿದ ವ್ಯಕ್ತಿಗೆ ಸ್ವಲ್ಪ ಸಮಯದೊಳಗೆ ಏನಾದರೂ ಖರೀದಿಸಲು ಸಾಧ್ಯವಾಗುವುದಾದರೆ ಆತ ಖರೀದಿಸಬಹುದು. ಆದರೆ ಖರೀದಿಯು ತುಂಬಾ ಸಮಯ ಹಿಡಿದರೆ ಆತ ಪುನಃ ತವಾಫುಲ್ ವಿದಾಅ್ ನಿರ್ವಹಿಸಬೇಕು.

## ಎಚ್ಚರ ವಹಿಸಬೇಕಾದ ಕೆಲವು ವಿಷಯಗಳು

ಹಜ್ಜ್ ಮತ್ತು ಉಮ್ರಃ ನಿರ್ವಹಿಸುವವರು ಸಾಮಾನ್ಯವಾಗಿ ಮಾಡುವ ಕೆಲವು ತಪ್ಪುಗಳ ಬಗ್ಗೆ ಇಲ್ಲಿ ಎಚ್ಚರಿಸಲಾಗಿದೆ. ಇಬಾದತ್‌ಗಳು ಸಿಂಧುವಾಗಲು ಮತ್ತು ಸರಿಯಾದ ವಿಧದಲ್ಲಾಗಲು ಇವುಗಳ ಬಗ್ಗೆ ಎಚ್ಚರ ವಹಿಸುವುದು ಮತ್ತು ಇವುಗಳಿಂದ ದೂರವಿರುವುದು ಕಡ್ಡಾಯವಾಗಿದೆ.

ಹಜ್ಜ್ ಕರ್ಮಗಳಿಗೆ ಸಂಬಂಧಿಸಿದ ಈ ತಪ್ಪುಗಳನ್ನು ಪಟ್ಟಿ ಮಾಡುವುದಕ್ಕೆ ಮೊದಲು ಇಸ್ಲಾಮ್ ಧರ್ಮದ ಬುನಾದಿ ಮತ್ತು ಅಸ್ತಿವಾರದೊಂದಿಗೆ ಸಂಬಂಧ ಹೊಂದಿರುವ ಪ್ರಮುಖ ವಿಷಯದ ಬಗ್ಗೆ ಎಚ್ಚರಿಸಬೇಕಾದ ಅಗತ್ಯವಿದೆ. ಅದೇನೆಂದರೆ ಹಜ್ಜ್ ಮತ್ತು ಉಮ್ರಃ ನಿರ್ವಹಿಸುವವರಲ್ಲಿ ಕೆಲವರು –ಅಲ್ಲಾಹು ಅವರಿಗೆ ಹಿದಾಯತ್ ನೀಡಲಿ– ಮಕ್ಕಾ ಮತ್ತು ಮದೀನದಲ್ಲಿರುವ ಕೆಲವು ಗೋರಿಗಳೆಡೆಗೆ ತೆರಳಿ, ಆ ಗೋರಿಯಲ್ಲಿರುವ ವ್ಯಕ್ತಿಯೊಂದಿಗೆ ಪ್ರಾರ್ಥಿಸುವುದು, ಅಥವಾ ಆ ವ್ಯಕ್ತಿಯನ್ನು ತವಸ್ಸುಲ್ ಮಾಡಿ ಪ್ರಾರ್ಥಿಸುವುದು, ಅಥವಾ ಆ ಗೋರಿಗಳಿಂದ ಬರಕತ್ ಪಡೆಯುವುದು, ಇತ್ಯಾದಿಗಳನ್ನು ಮಾಡುತ್ತಾರೆ. ಇವು ಇಸ್ಲಾಮೀ ವಿಶ್ವಾಸಕ್ಕೆ ವಿರುದ್ಧವಾಗಿರುವ ಶಿರ್ಕ್ ಮತ್ತು

ಬಿದ್‌ಅತ್‌ಗಳಾಗಿವೆ. ಝಿಯಾರತ್ ಮಾಡುವುದಾದರೆ ಶರೀಅತ್ ನಿರ್ದೇಶಿಸಿದ ರೀತಿಯಲ್ಲೇ ಮಾಡಬೇಕು. ಅಂದರೆ ಗೋರಿಯಲ್ಲಿರುವ ವ್ಯಕ್ತಿಗೆ ಸಲಾಮ್ ಹೇಳಿ, ನಂತರ ಅವರಿಗೋಸ್ಕರ ಮಗ್ಫಿರತ್ ಮತ್ತು ರಹ್ಮತ್‌ಗಾಗಿ ಪ್ರಾರ್ಥಿಸಬೇಕು. ಗೋರಿ ಸಂದರ್ಶನದ ಉದ್ದೇಶವು ಮರಣ ಮತ್ತು ಪರಲೋಕ ಜೀವನವನ್ನು ನೆನಪು ಮಾಡುವುದಕ್ಕಾಗಿರಬೇಕು.

ಪ್ರವಾದಿ(ﷺ)ರವರು ಹೇಳಿದರು:

«كُنْتُ نَهَيْتُكُمْ عَنْ زِيَارَةِ الْقُبُورِ، أَلَا فَزُورُوهَا، فَإِنَّهَا تُذَكِّرُ الْمَوْتَ».

رواه مسلم

“ನಾನು ನಿಮಗೆ ಗೋರಿ ಸಂದರ್ಶನವನ್ನು ವಿರೋಧಿಸಿದ್ದೆ. ಈಗ ನೀವು ಅವುಗಳನ್ನು ಸಂದರ್ಶಿಸಿರಿ. ಯಾಕೆಂದರೆ ಅದು ಮರಣವನ್ನು ನೆನಪಿಸುತ್ತದೆ.” [ಮುಸ್ಲಿಮ್]

ಗೋರಿ ಸಂದರ್ಶನಕ್ಕಾಗಿ ಯಾತ್ರೆ ಹೊರಡುವುದು ಶರೀಅತ್ತಿಗೆ ವಿರುದ್ಧವಾಗಿದೆ. ಗೋರಿ ಸಂದರ್ಶನವಿರುವುದು ಪುರುಷರಿಗೆ ಮಾತ್ರ. ಮಹಿಳೆಯರಿಗಲ್ಲ. ಪ್ರವಾದಿ(ﷺ)ರವರು ಗೋರಿ ಸಂದರ್ಶನ ಮಾಡುವಾಗ ಅದರಲ್ಲಿರುವ ವ್ಯಕ್ತಿಗೆ ಸಲಾಮ್ ಹೇಳಿ, ನಂತರ ಆ ವ್ಯಕ್ತಿಗೋಸ್ಕರ ಮಗ್ಫಿರತ್ ಮತ್ತು ರಹ್ಮತ್ತನ್ನು ಪ್ರಾರ್ಥಿಸುತ್ತಿದ್ದರು.

ಹಜ್ಜ್ ಮತ್ತು ಉಮ್ರಃ ನಿರ್ವಹಿಸುವವರು ಮಾಡುವ ಇನ್ನೊಂದು ತಪ್ಪು ಏನೆಂದರೆ ಮಕ್ಕಾ ಮತ್ತು ಮದೀನದಲ್ಲಿರುವ, ಹಜ್ಜ್ ಅಥವಾ ಉಮ್ರಃ ಕರ್ಮಗಳೊಂದಿಗೆ ಅಥವಾ ಇಬಾದತ್‌ನೊಂದಿಗೆ ಯಾವುದೇ ಸಂಬಂಧವೂ ಇಲ್ಲದ ಕೆಲವು ಸ್ಥಳಗಳಿಗೆ ತೆರಳಿ ತಮ್ಮ ಹಣ ಮತ್ತು ಸಮಯವನ್ನು ಪೋಲು ಮಾಡುವುದು. ಉದಾಹರಣೆಗೆ, ಮಕ್ಕಾದಲ್ಲಿ ಹಿರಾ ಗುಹೆ, ಸೌರ್

ಗುಹೆ ಮತ್ತಿತರ ಕಡೆಗಳಿಗೆ ಹೋಗುವುದು, ಮದೀನದಲ್ಲಿ ಏಳು ಮಸೀದಿಗಳು, ಮಸ್ಜಿದುಲ್ ಕಿಬ್ಲತೈನ್, ಮಸ್ಜಿದುಲ್ ಗಮಾಮಃ ಮತ್ತಿತರ ಕಡೆಗಳಿಗೆ ಹೋಗುವುದು ಮತ್ತು ನಮಾಝ್ ಮಾಡುವುದಕ್ಕಾಗಿ, ಪ್ರಾರ್ಥಿಸುವುದಕ್ಕಾಗಿ ಕೆಲವು ನಿಶ್ಚಿತ ಸ್ಥಳಗಳಿಗೆ ಹೋಗುವುದು. ಇವೆಲ್ಲವೂ ಬಿದ್ಅತ್‌ಗಳಾಗಿವೆ. ಭೂಮಿಯ ಮೇಲೆ ಯಾತ್ರೆ ಮಾಡಿ ಪುಣ್ಯ ಸಂಪಾದಿಸಲು ಅಥವಾ ನಮಾಝ್ ಮಾಡಿ ಪುಣ್ಯ ಸಂಪಾದಿಸಲು ತೆರಳಬಹುದಾದ ಸ್ಥಳಗಳು ಮೂರು ಮಾತ್ರ. ಅಲ್‌ಮಸ್ಜಿದುಲ್ ಹರಾಮ್, ಅಲ್‌ಮಸ್ಜಿದುನ್ನಬವೀ ಮತ್ತು ಅಲ್‌ಮಸ್ಜಿದುಲ್ ಅಕ್ಸಾ. ಕುಬಾ ಮಸೀದಿಗೆ ತೆರಳುವುದು ಪುಣ್ಯಕರವಾಗಿರುವುದು ಮದೀನಾದಲ್ಲಿರುವವರಿಗೆ ಮಾತ್ರ. ಈ ಮಸೀದಿಗಳ ಹೊರತು ಇತರ ಮಸೀದಿಗಳೆಲ್ಲವೂ ಪುಣ್ಯದ ವಿಷಯದಲ್ಲಿ ಒಂದೇ ರೀತಿಯಾಗಿವೆ. ಅವುಗಳಲ್ಲಿ ಒಂದು ಮಸೀದಿ ಇನ್ನೊಂದು ಮಸೀದಿಗಿಂತ ಶ್ರೇಷ್ಠವೆಂಬುದಕ್ಕೆ ಯಾವುದೇ ಪುರಾವೆಯಿಲ್ಲ.

**ಒಂದು: ಇಹ್ರಾಮ್‌ಗೆ ಸಂಬಂಧಿಸಿದ ತಪ್ಪುಗಳು:**

1. ಇಹ್ರಾಮ್ ಮಾಡದೆ ಮೀಕಾತ್‌ಗಳನ್ನು ದಾಟುವುದು: ಹಜ್ಜ್ ಅಥವಾ ಉಮ್ರಃ ನಿರ್ವಹಿಸಲು ಉದ್ದೇಶಿಸುವ ವ್ಯಕ್ತಿ ಇಹ್ರಾಮ್ ಮಾಡದೆ ಮೀಕಾತನ್ನು ದಾಟಿದರೆ ಮೀಕಾತ್‌ಗೆ ಹಿಂದಿರುಗುವುದು ಅವನ ಮೇಲೆ ಕಡ್ಡಾಯವಾಗಿದೆ. ಇದು ಅವನಿಗೆ ಸಾಧ್ಯವಾಗದಿದ್ದರೆ ಅವನು ಬಲಿಮೃಗವನ್ನು ಬಲಿ ನೀಡಬೇಕು.

2. ಇಹ್ರಾಮ್ ಮಾಡುವುದು ಎಂದರೆ ಇಹ್ರಾಮ್‌ನ ಉಡುಪುಗಳನ್ನು ತೊಡುವುದಾಗಿದೆಯೆಂದು ಕೆಲವರು ಭಾವಿಸುತ್ತಾರೆ. ವಾಸ್ತವವಾಗಿ, ಇಹ್ರಾಮ್ ಎಂದರೆ ‘ನಾನು ಹಜ್ಜ್ ಅಥವಾ ಉಮ್ರಃ ಕರ್ಮಗಳಲ್ಲಿ ಪ್ರವೇಶಿಸುತ್ತೇನೆ’ ಎಂದು ಹೃದಯದಲ್ಲಿ ನಿಯ್ಯತ್ ಮಾಡುವುದಾಗಿದೆ.

ಇಹ್ರಾಮ್‌ನ ಉಡುಪುಗಳನ್ನು ಧರಿಸುವುದು ಇಹ್ರಾಮ್‌ಗಾಗಿ ಸಿದ್ಧಗೊಳ್ಳುವುದಾಗಿದೆ. ಅದು ಇಹ್ರಾಮ್‌ನ ಒಂದು ಲಾಂಛನ ಮಾತ್ರವಾಗಿದೆ.

3. ಇಹ್ರಾಮ್‌ನ ಉಡುಪುಗಳಿಗೆ ಹಸಿರು ಅಥವಾ ಬಿಳಿ ಮೊದಲಾದ ಒಂದು ನಿಶ್ಚಿತವಾದ ಬಣ್ಣವಿದೆಯೆಂದು ಕೆಲವು ಮಹಿಳೆಯರು ಭಾವಿಸುತ್ತಾರೆ. ಇದು ತಪ್ಪು. ಮಹಿಳೆಯು ಆಕೆ ಸಾಧಾರಣವಾಗಿ ಉಡುವ ಬಟ್ಟೆಯಲ್ಲೇ ಇಹ್ರಾಮ್ ಮಾಡಬಹುದು. ಆದರೆ ಅಲಂಕಾರವಿರುವ ಮತ್ತು ಪುರುಷರನ್ನು ಹೋಲುವ ಬಟ್ಟೆಗಳನ್ನು ವರ್ಜಿಸಬೇಕು.

4. ಕೆಲವು ಮಹಿಳೆಯರಿಗೆ ಮೀಕಾತ್‌ನ ಮೂಲಕ ಹಾದು ಹೋಗುವಾಗ ಋತುಸ್ರಾವವುಂಟಾದರೆ ಅಥವಾ ಹೆರಿಗೆ ರಕ್ತವುಂಟಾದರೆ ಅವರು ಇಹ್ರಾಮ್ ಮಾಡುವುದನ್ನು ತೊರೆಯುತ್ತಾರೆ. ಇಹ್ರಾಮ್ ಮಾಡಬೇಕಾದರೆ ಋತುಸ್ರಾವ ಮತ್ತು ಹೆರಿಗೆ ರಕ್ತದಿಂದ ಶುದ್ಧವಾಗಿರಬೇಕು ಎಂದು ಅವರು ಅಥವಾ ಅವರ ಪೋಷಕರು ಭಾವಿಸುವುದು ಇದಕ್ಕಿರುವ ಕಾರಣವಾಗಿದೆ. ವಾಸ್ತವವೇನೆಂದರೆ, ಋತುಸ್ರಾವ ಮತ್ತು ಹೆರಿಗೆ ರಕ್ತವು ಇಹ್ರಾಮ್‌ನಿಂದ ಮಹಿಳೆಯರನ್ನು ತಡೆಯುವುದಿಲ್ಲ. ಮಾತ್ರವಲ್ಲ, ಇಹ್ರಾಮ್ ಮಾಡುವುದು ಮತ್ತು ಹಾಜಿಗಳು ಮಾಡುವ ಎಲ್ಲ ಕರ್ಮಗಳನ್ನು ಮಾಡುವುದು ಆ ಮಹಿಳೆಯರ ಮೇಲೆ ಕಡ್ಡಾಯವಾಗಿದೆ. ಆದರೆ ಶುದ್ಧಿಯಾಗುವ ತನಕ ಅವರು ಕಅ್‌ಬಾಲಯಕ್ಕೆ ತವಾಫ್ ಮಾಡುವುದನ್ನು ಮುಂದೂಡಬೇಕು. ಶುದ್ಧಿಯಾದ ಬಳಿಕ ಸ್ನಾನ ಮಾಡಿ ತವಾಫ್ ಮಾಡುವುದಕ್ಕಾಗಿ ತೆರಳಬೇಕು. ಅವರು ಈಗಾಗಲೇ ಇಹ್ರಾಮ್‌ನಲ್ಲಿರುವುದಾದರೆ ಪುನಃ ತನ್‌ಈಮ್‌ಗೆ ಅಥವಾ ಮೀಕಾತ್‌ಗೆ ತೆರಳಿ ಇಹ್ರಾಮ್ ಮಾಡಬೇಕಾದ ಅಗತ್ಯವಿಲ್ಲ.

5. ಕೆಲವು ಮಹಿಳೆಯರು ಇಹ್ರಾಮ್ ಮಾಡುವಾಗ ಮುಖದ ಮೇಲಿರುವ ಪರದೆಯು ಮುಖವನ್ನು ಸ್ಪರ್ಶಿಸದಂತೆ ತಡೆಯಲು ತಮ್ಮ

ತಲೆಯ ಮೇಲೆ ರುಮಾಲನ್ನು ಹೋಲುವ ವಸ್ತ್ರಗಳನ್ನು ಇಡುತ್ತಾರೆ. ಇದೊಂದು ನಿರರ್ಥಕ ಹೊರೆಯಾಗಿದೆ. ಇದಕ್ಕೆ ಯಾವುದೇ ಪುರಾವೆಯಿಲ್ಲ. ಯಾಕೆಂದರೆ ಅನ್ಯ ಪುರುಷರಿಂದ ರಕ್ಷಿಸಿಕೊಳ್ಳಲು ಮುಖದ ಮೇಲೆ ಶಾಲನ್ನು ಇಡುವುದರಲ್ಲಿ ಯಾವುದೇ ತೊಂದರೆಯಿಲ್ಲ.

6. ಕೆಲವು ಪುರುಷರು ಇಹ್ರಾಮ್‌ನ ಉಡುಪುಗಳನ್ನು ಧರಿಸುವಾಗ ಇದ್ತಿಬಾಅ್ ಮಾಡುವ ರೀತಿಯಲ್ಲಿ ತಮ್ಮ ಹೆಗಲನ್ನು ಪ್ರದರ್ಶಿಸುತ್ತಾರೆ. ಆದರೆ ಇದನ್ನು ಮಾಡಬೇಕಾದುದು ತವಾಫುಲ್ ಕುದೂಮ್‌ನ (ಆಗಮನದ ತವಾಫ್) ಸಂದರ್ಭದಲ್ಲಿ ಅಥವಾ ಉಮ್ರಃದ ತವಾಫ್‌ನ ಸಂದರ್ಭದಲ್ಲಿ ಮಾತ್ರ. ಇದಲ್ಲದ ಬೇರೆ ಸಂದರ್ಭಗಳಲ್ಲಿ ಎರಡು ಹೆಗಲುಗಳನ್ನೂ ಮುಚ್ಚಬಹುದು.

**ಎರಡು: ತವಾಫ್‌ಗೆ ಸಂಬಂಧಿಸಿದ ತಪ್ಪುಗಳು:**

1. ತವಾಫ್ ಮಾಡುವ ಕೆಲವರು ತಮ್ಮ ತವಾಫನ್ನು ಅಲ್‌ಹಜರುಲ್ ಅಸ್ವದ್‌ಗೆ ತಲುಪುವ ಮೊದಲೇ ಆರಂಭಿಸುತ್ತಾರೆ. ಆದರೆ ಕಡ್ಡಾಯವಾಗಿರುವುದು ತವಾಫನ್ನು ಅಲ್‌ಹಜರುಲ್ ಅಸ್ವದ್‌ನ ಬಳಿಯಿಂದ ಆರಂಭಿಸುವುದು. ಅಂದರೆ ಎಡಹೆಗಲು ಅದಕ್ಕೆ ಸರಿಸಮವಾಗುವ ಸ್ಥಳದಿಂದ ಆರಂಭಿಸಿ ಅಲ್ಲಿಗೇ ಕೊನೆಗೊಳಿಸುವುದು.

2. ತವಾಫ್ ಮಾಡುವ ಕೆಲವರು ಕೆಲವು ವಿಶೇಷ ಪ್ರಾರ್ಥನೆಗಳನ್ನು ಗಟ್ಟಿಯಾಗಿ ಪ್ರಾರ್ಥಿಸುತ್ತಾರೆ. ಒಂದು ಗುಂಪು ಜನರು ಅವರೊಂದಿಗೆ ಅದನ್ನು ಪುನರಾವರ್ತಿಸುತ್ತಾರೆ. ಇವರಿಂದ ಇತರರಿಗೆ ತೊಂದರೆಯಾಗುತ್ತದೆ. ಆದರೆ ತವಾಫ್ ಮಾಡುವ ಸಂದರ್ಭ ಪ್ರಾರ್ಥಿಸಬೇಕೆಂದು ಹೇಳುವ ವಿಶೇಷ ಪ್ರಾರ್ಥನೆಗಳು ಶರೀಅತ್ತಿನಲ್ಲಿ ಬಂದಿಲ್ಲ. ಆದರೆ ರುಕ್ನ್ ಯಮಾನೀ ಮತ್ತು ಅಲ್‌ಹಜರುಲ್ ಅಸ್ವದ್‌ನ

ಮಧ್ಯೆ “ರಬ್ಬನಾ ಆತಿನಾ ಫಿದ್ದುನ್ಯಾ ಹಸನತನ್ ವಫಿಲ್ ಆಖಿರತಿ ಹಸನತನ್ ವಕಿನಾ ಅದಾಬನ್ನಾರ್” ಎಂದು ಪ್ರಾರ್ಥಿಸಬೇಕು.

3. ಹಿಜ್ರ್ ಇಸ್ಮಾಈಲ್‌ನ ಒಳಭಾಗದಿಂದ ತವಾಫ್ ಮಾಡಿದರೆ ತವಾಫ್ ಸಿಂಧುವಲ್ಲ. ಯಾಕೆಂದರೆ ಅದರ ಕೆಲವು ಭಾಗಗಳು ಕಅ್‌ಬಾಲಯದಲ್ಲಿ ಒಳಪಟ್ಟದ್ದು. ಯಾರಾದರೂ ಅದರ ಒಳಭಾಗದಿಂದ ತವಾಫ್ ಮಾಡಿದರೆ ಅವರ ತವಾಫ್ ಸಿಂಧುವಲ್ಲ. ಅವರು ಅದನ್ನು ಪುನರಾವರ್ತಿಸಬೇಕು.

4. ತವಾಫ್ ಮಾಡುವ ಕೆಲವರು ಎಲ್ಲ ಏಳು ಪ್ರದಕ್ಷಿಣೆಗಳಲ್ಲೂ ರಮ್ಲ್ ಮಾಡುತ್ತಾರೆ. ರಮ್ಲ್ ಮಾಡುವುದು ಎಂದರೆ ಹತ್ತಿರ ಹತ್ತಿರ ಹೆಜ್ಜೆಗಳನ್ನಿಟ್ಟು ವೇಗವಾಗಿ ನಡೆಯುವುದು. ಇದು ಮೊದಲ ಮೂರು ಪ್ರದಕ್ಷಿಣೆಗಳಲ್ಲಿ ಮಾತ್ರ ಮಾಡಬೇಕು. ಅದೂ ಕೂಡ ತವಾಫುಲ್ ಕುದೂಮ್‌ನಲ್ಲಿ ಮಾತ್ರ.

5. ತವಾಫ್ ಮಾಡುವ ಕೆಲವರು ಅಲ್‌ಹಜರುಲ್ ಅಸ್ವದನ್ನು ಚುಂಬಿಸುವುದಕ್ಕಾಗಿ ನೂಕು ನುಗ್ಗಲು ಮಾಡಿ ಇತರರಿಗೆ ತೊಂದರೆ ಕೊಡುತ್ತಾರೆ. ಇದು ಕೆಲವೊಮ್ಮೆ ಇತರರಿಗೆ ಬೈಯ್ಯುವ ಮತ್ತು ಥಳಿಸುವ ಹಂತಕ್ಕೂ ತಲುಪುತ್ತದೆ. ಇದರಿಂದಾಗಿ ಅವರು ಪಾಪ ಮಾಡಿದವರಾಗುತ್ತಾರೆ. ಅಲ್‌ಹಜರುಲ್ ಅಸ್ವದನ್ನು ಚುಂಬಿಸುವುದು ಸುನ್ನತ್ ಮಾತ್ರ. ತವಾಫ್ ಸಿಂಧುವಾಗಲು ಅದೊಂದು ಷರತ್ತಲ್ಲ.

6. ತವಾಫ್ ಮಾಡುವ ಕೆಲವರು ಕಅ್‌ಬಾಲಯದ ಎಲ್ಲ ಮೂಲೆಗಳನ್ನೂ ಕೈಯಿಂದ ಮುಟ್ಟುತ್ತಾರೆ. ಕೆಲವೊಮ್ಮೆ ಅದರ ಎಲ್ಲ ಗೋಡೆಗಳನ್ನೂ ಮುಟ್ಟುತ್ತಾರೆ. ಹಾಗೆಯೇ ಮಕಾಮ್ ಇಬ್ರಾಹೀಮನ್ನೂ ಸವರಿಕೊಳ್ಳುತ್ತಾರೆ. ಆದರೆ ಸುನ್ನತ್ ಆಗಿರುವುದು ಅಲ್‌ಹಜರುಲ್ ಅಸ್ವದನ್ನು ಮುಟ್ಟುವುದು ಮತ್ತು ಚುಂಬಿಸುವುದು ಅಥವಾ ಅದರೆಡೆಗೆ ಕೈಯಿಂದ ಸನ್ನೆ ಮಾಡುವುದು ಹಾಗೂ ರುಕ್ನ್ ಯಮಾನೀಯನ್ನು ಮುಟ್ಟುವುದು ಮಾತ್ರ.

7. ತವಾಫ್ ಮಾಡುವ ಕೆಲವರು ಮಕಾಮ್ ಇಬ್ರಾಹೀಮ್‌ನ ಹಿಂದೆ ನಮಾಝ್ ಮಾಡುವುದಕ್ಕಾಗಿ ನೂಕುನುಗ್ಗಲು ಮಾಡುತ್ತಾರೆ. ಇದರಿಂದ ತವಾಫ್ ಮಾಡುವ ಇತರರಿಗೆ ಇಕ್ಕಟ್ಟಾಗುತ್ತದೆ. ತವಾಫ್‌ನ ಎರಡು ರಕ್‌ಅತ್ ಸುನ್ನತ್ ನಮಾಝನ್ನು ಮಸೀದಿಯ ಯಾವುದೇ ಭಾಗದಲ್ಲೂ ನಿರ್ವಹಿಸಬಹುದು.

8. ಕೆಲವು ಮಹಿಳೆಯರು ಅಲ್‌ಹಜರುಲ್ ಅಸ್ವದ್‌ನ ಸಮೀಪ ಪುರುಷರನ್ನು ತಳ್ಳುತ್ತಾರೆ. ಇದಕ್ಕೆ ಅನುಮತಿಯಿಲ್ಲ. ಯಾಕೆಂದರೆ ಇದು ಕೆಡುಕು ಮತ್ತು ಫಿತ್ನಕ್ಕೆ ಕಾರಣವಾಗುತ್ತದೆ.

**ಮೂರು: ಸಅ್‌ಯ್‌ಗೆ ಸಂಬಂಧಿಸಿದ ತಪ್ಪುಗಳು:**

1. ಸಅ್‌ಯ್ ಮಾಡುವಾಗ ಕೆಲವರು ಸಫಾ ಬೆಟ್ಟದ ಕೊನೆಯವರೆಗೆ ಅಥವಾ ಮರ್ವಾ ಬೆಟ್ಟದ ಕೊನೆಯವರೆಗೆ, ಅಂದರೆ ಅಲ್ಲಿನ ಗೋಡೆಯವರೆಗೆ ತಲುಪದಿದ್ದರೆ ಸಅ್‌ಯ್ ಪೂರ್ತಿಯಾಗುವುದಿಲ್ಲ ಎಂದು ಭಾವಿಸುತ್ತಾರೆ. ಆದರೆ ವಾಸ್ತವವಾಗಿ ಸಫಾ ಮತ್ತು ಮರ್ವಾ ಬೆಟ್ಟದ ಮೇಲೇರಿದರೆ ಸಅ್‌ಯ್ ಸಿಂಧುವಾಗುತ್ತದೆ. ಕೊನೆಯವರೆಗೆ ತಲುಪಬೇಕೆಂದಿಲ್ಲ.

2. ಸಅ್‌ಯ್ ಮಾಡುವ ಕೆಲವರು ಸಫಾದಿಂದ ಪ್ರಾರಂಭಿಸಿ ಸಫಾದಲ್ಲೇ ಕೊನೆಯಾಗುವಂತೆ ಹದಿನಾಲ್ಕು ಬಾರಿ ಪ್ರದಕ್ಷಿಣೆ ಮಾಡುತ್ತಾರೆ. ಇದು ತಪ್ಪು. ಕಡ್ಡಾಯವಾಗಿರುವುದು ಏಳು ಬಾರಿ ಪ್ರದಕ್ಷಿಣೆ ಮಾಡುವುದು ಮಾತ್ರ. ಅಂದರೆ ಸಫಾದಿಂದ ಮರ್ವಾಗೆ ಒಂದು ಪ್ರದಕ್ಷಿಣೆ. ಮರ್ವಾದಿಂದ ಸಫಾಗೆ ಇನ್ನೊಂದು ಪ್ರದಕ್ಷಿಣೆ. ಹೀಗೆ ಸಫಾದಿಂದ ಪ್ರಾರಂಭಿಸಿ ಮರ್ವಾದಲ್ಲಿ ಕೊನೆಯಾಗುವಂತೆ ಏಳು ಬಾರಿ ಪ್ರದಕ್ಷಿಣೆ ಮಾಡಬೇಕು.

3. ಸಅ್‌ಯ್ ಮಾಡುವಾಗ ಕೆಲವರು ಎಲ್ಲ ಪ್ರದಕ್ಷಿಣೆಗಳಲ್ಲೂ ವೇಗವಾಗಿ ನಡೆಯುತ್ತಾರೆ. ಆದರೆ ಎರಡು ಹಸಿರು ಕಂಬಗಳ ನಡುವೆ ಮಾತ್ರ ವೇಗವಾಗಿ ನಡೆಯುವುದು ಸುನ್ನತ್. ಇದರ ಹೊರತಾದ ಸ್ಥಳದಲ್ಲಿ ಸಾಧಾರಣ ರೀತಿಯಲ್ಲಿ ನಡೆಯಬೇಕು. ವೇಗವಾಗಿ ನಡೆಯಬೇಕಾದುದು ಪುರುಷರು ಮಾತ್ರ. ಮಹಿಳೆಯರು ವೇಗವಾಗಿ ನಡೆಯಬೇಕಾಗಿಲ್ಲ.

4. ಕೆಲವರು ಸಫಾ ಅಥವಾ ಮರ್ವಾದ ಬೆಟ್ಟವನ್ನೇರಿ ಕಅ್‌ಬಾಲಯಕ್ಕೆ ಮುಖ ಮಾಡಿ ನಮಾಝ್‌ನಲ್ಲಿ ಕೈಯೆತ್ತುವಂತೆ ಕೈಯೆತ್ತಿ ತಕ್ಬೀರ್ ಹೇಳುತ್ತಾರೆ. ಇದು ತಪ್ಪು. ದುಆ ಮಾಡುವಾಗ ಮಾತ್ರ ಕೈಯೆತ್ತುವುದು ಸುನ್ನತ್. ತಹ್ಮೀದ್ ಮತ್ತು ತಕ್ಬೀರ್‌ಗಳನ್ನು ಹೇಳುವಾಗ ಕಅ್‌ಬಾಲಯಕ್ಕೆ ಮುಖ ಮಾಡಬೇಕು.

5. ತವಾಫ್ ಮಾಡಿದ ಬಳಿಕ ಎರಡು ರಕ್‌ಅತ್ ನಮಾಝ್ ಮಾಡುವಂತೆ ಸಅ್‌ಯ್ ಮಾಡಿದ ಬಳಿಕವೂ ಕೆಲವರು ಎರಡು ರಕ್‌ಅತ್ ನಮಾಝ್ ಮಾಡುತ್ತಾರೆ. ಇದು ಶರೀಅತ್ತಿನಲ್ಲಿಲ್ಲ.

6. ನಮಾಝ್‌ಗಾಗಿ ಇಕಾಮತ್ ನೀಡಿದ ಬಳಿಕವೂ ಕೆಲವರು ಪ್ರದಕ್ಷಿಣೆ ಪೂರ್ತಿ ಮಾಡುವುದಕ್ಕಾಗಿ ಸಅ್‌ಯ್ ಮಾಡುವುದನ್ನು ಮುಂದುವರಿಸುತ್ತಾರೆ. ಇದು ತಪ್ಪು. ಜಮಾಅತ್ ಆಗಿ ನಮಾಝ್ ಮಾಡುವುದು ಕಡ್ಡಾಯ. ನಂತರ ಸಅ್‌ಯನ್ನು ಪೂರ್ತಿ ಮಾಡಬಹುದು.

**ನಾಲ್ಕು: ಅರಫಃಕ್ಕೆ ಸಂಬಂಧಿಸಿದ ತಪ್ಪುಗಳು:**

1. ಕೆಲವು ಹಾಜಿಗಳು ತಾವು ಅರಫಃ ಸೀಮೆಯೊಳಗೆ ಇದ್ದೇವೆಂಬುದನ್ನು ಖಾತ್ರಿಪಡಿಸುವುದಿಲ್ಲ. ಹೀಗೆ ಅವರು ಅರಫಃ ಸೀಮೆಯ ಹೊರಗೆ ಸೂರ್ಯಾಸ್ತದ ತನಕ ಬಾಕಿಯಾಗುತ್ತಾರೆ. ನಂತರ ಅರಫಃದಲ್ಲಿ

ನಿಲ್ಲದೆ ಮುಝ್ದಲಿಫಃಕ್ಕೆ ತೆರಳುತ್ತಾರೆ. ಇದರಿಂದಾಗಿ ಅವರಿಗೆ ಹಜ್ಜ್ ನಷ್ಟವಾಗುತ್ತದೆ. ಯಾಕೆಂದರೆ ಹಜ್ಜ್ ಎಂದರೆ ಅದು ಅರಫಃ ಆಗಿದೆ.

2. ಕೆಲವು ಹಾಜಿಗಳು ಸೂರ್ಯಾಸ್ತಕ್ಕೆ ಮೊದಲೇ ಅರಫಃದಿಂದ ತೆರಳುತ್ತಾರೆ. ಇದಕ್ಕೆ ಅನುಮತಿಯಿಲ್ಲ. ಬದಲಾಗಿ ಸೂರ್ಯಾಸ್ತದ ತನಕ ಅರಫಃದಲ್ಲಿ ನಿಲ್ಲುವುದು ಕಡ್ಡಾಯವಾಗಿದೆ. ಯಾರಾದರೂ ಸೂರ್ಯಾಸ್ತಕ್ಕೆ ಮೊದಲೇ ನಿರ್ಗಮಿಸಿ ಪುನಃ ಅರಫಃಕ್ಕೆ ಮರಳದಿದ್ದರೆ ಅವರು ಬಲಿಮೃಗವನ್ನು ಬಲಿನೀಡಬೇಕು.

3. ಕೆಲವು ಹಾಜಿಗಳು ಅರಫಃ ಬೆಟ್ಟವನ್ನು –ಜಬಲುರ್ರಹ್ಮಃವನ್ನು– ಏರಿ ಅದರ ತುದಿಯನ್ನು ತಲುಪಲು ನೂಕುನುಗ್ಗಲು ಮಾಡುತ್ತಾರೆ. ಇದು ಅಜ್ಞಾನವಾಗಿದೆ. ಅರಫಃ ಸಂಪೂರ್ಣವಾಗಿ ನಿಲ್ಲುವುದಕ್ಕಿರುವ ಸ್ಥಳವಾಗಿದೆ. ಬೆಟ್ಟವನ್ನು ಏರಬೇಕೆಂಬುದು ಶರೀಅತ್ತಿನಲ್ಲಿಲ್ಲ. ಹಾಗೆಯೇ ವಿಶೇಷವಾಗಿ ಆ ಸ್ಥಳದಲ್ಲಿ ನಮಾಝ್ ನಿರ್ವಹಿಸಬೇಕೆಂದು ಕೂಡ ಶರೀಅತ್ತಿನಲ್ಲಿ ಬಂದಿಲ್ಲ.

4. ಕೆಲವು ಹಾಜಿಗಳು ಪ್ರಾರ್ಥಿಸುವಾಗ ಅರಫಃ ಬೆಟ್ಟದೆಡೆಗೆ –ಜಬಲುರ್ರಹ್ಮಃದೆಡೆಗೆ– ತಿರುಗುತ್ತಾರೆ. ಇದು ತಪ್ಪು. ಕಡ್ಡಾಯವಾಗಿರುವುದು ಕಿಬ್ಲಃದೆಡೆಗೆ ತಿರುಗುವುದು.

5. ಕೆಲವು ಹಾಜಿಗಳು ಅರಫಃ ದಿನದಂದು ಕೆಲವು ನಿಶ್ಚಿತ ಸ್ಥಳಗಳಲ್ಲಿ ಮಣ್ಣು ಮತ್ತು ಹರಳುಕಲ್ಲುಗಳನ್ನು ಶೇಖರಿಸಲು ತೊಡಗುತ್ತಾರೆ. ಇದೊಂದು ಬಿದ್‌ಅತ್. ಇದಕ್ಕೆ ಪುರಾವೆಯಿಲ್ಲ.

6. ಕೆಲವು ಹಾಜಿಗಳು ಅರಫಃದಿಂದ ಮುಝ್ದಲಿಫಃಕ್ಕೆ ತೆರಳುವಾಗ ಆತುರಪಡುತ್ತಾರೆ, ಮುಸ್ಲಿಮರಿಗೆ ತೊಂದರೆ ಕೊಡುತ್ತಾರೆ ಮತ್ತು ವಾಹನಗಳ ಮೂಲಕ ನೂಕುನುಗ್ಗಲು ಸೃಷ್ಟಿಸುತ್ತಾರೆ. ಕರ್ಕಶವಾಗಿ ಹಾರ್ನ್

ಮಾಡುತ್ತಾರೆ. ಇದು ತಪ್ಪು. ಸುನ್ನತ್ತಾಗಿರುವುದು ಶಾಂತವಾಗಿ ಮತ್ತು ಸೌಮ್ಯವಾಗಿ ನಡೆಯುವುದು.

**ಐದು: ಮುಝ್ದಲಿಫಃಕ್ಕೆ ಸಂಬಂಧಿಸಿದ ತಪ್ಪುಗಳು:**

1. ಕೆಲವು ಹಾಜಿಗಳು ಮುಝ್ದಲಿಫಃಕ್ಕೆ ತಲುಪಿದ ತಕ್ಷಣ ಮಗ್ರಿಬ್ ಮತ್ತು ಇಶಾ ನಮಾಝ್ ನಿರ್ವಹಿಸುವುದಕ್ಕೆ ಮೊದಲು ಕಲ್ಲು ಹೆಕ್ಕಲು ತೊಡಗುತ್ತಾರೆ. ಸುನ್ನತ್ತಾಗಿರುವುದು ಮುಝ್ದಲಿಫಃದಿಂದ ಮಿನಾಗೆ ತೆರಳುವಾಗ ಕಲ್ಲನ್ನು ಹೆಕ್ಕುವುದು. ಕಲ್ಲನ್ನು ಯಾವುದೇ ಸ್ಥಳದಿಂದಲೂ ಹೆಕ್ಕಬಹುದು.

2. ಕೆಲವು ಹಾಜಿಗಳು ಅರ್ಧ ರಾತ್ರಿಗೆ ಮೊದಲೇ ಮುಝ್ದಲಿಫಃದಿಂದ ತೆರಳುತ್ತಾರೆ. ಅವರು ಮುಝ್ದಲಿಫಃದಲ್ಲಿ ರಾತ್ರಿ ತಂಗುವುದಿಲ್ಲ. ಯಾವುದೇ ವಿನಾಯಿತಿಯಿಲ್ಲದೇ ಮುಝ್ದಲಿಫಃದಲ್ಲಿ ರಾತ್ರಿ ತಂಗದವರು ಹಜ್ಜ್‌ನ ಕಡ್ಡಾಯಗಳಲ್ಲಿ ಸೇರಿದ ಒಂದು ಕಡ್ಡಾಯವನ್ನು ತೊರೆದವರಾಗುತ್ತಾರೆ.

**ಆರು: ಕಲ್ಲೆಸೆಯುವುದಕ್ಕೆ ಸಂಬಂಧಿಸಿದ ತಪ್ಪುಗಳು:**

1. ಕಲ್ಲೆಸೆಯುವುದಕ್ಕಾಗಿ ಜಮ್ರಃಗಳ ಬಳಿ ನೂಕುನುಗ್ಗಲು ಮಾಡುವುದು ತಪ್ಪು. ಸೌಮ್ಯವಾಗಿ, ಇತರ ಮುಸ್ಲಿಮರಿಗೆ ಯಾವುದೇ ತೊಂದರೆ ಕೊಡದೆ, ಕಲ್ಲೆಸೆಯಬೇಕು.

2. ಕೆಲವು ಹಾಜಿಗಳು ಎಲ್ಲ ಕಲ್ಲುಗಳನ್ನೂ ಒಂದೇ ಎಸೆತದಲ್ಲಿ ಎಸೆದು ಬಿಡುತ್ತಾರೆ. ಇದು ತಪ್ಪು. ಕಲ್ಲುಗಳನ್ನು ಒಂದೊಂದಾಗಿ, ಪ್ರತಿಯೊಂದು ಎಸೆತದೊಂದಿಗೂ ತಕ್ಬೀರ್ ಹೇಳುತ್ತಾ ಎಸೆಯಬೇಕು.

3. ಕೆಲವು ಹಾಜಿಗಳು ಜಮ್ರಃಕ್ಕೆ ಕಲ್ಲೆಸೆಯುವುದು ಎಂದರೆ ಶೈತಾನನಿಗೆ ಕಲ್ಲೆಸೆಯುವುದು ಎಂದು ನಂಬುತ್ತಾರೆ. ಈ ಕಾರಣದಿಂದಲೇ ಅವರು

ಗಟ್ಟಿಯಾಗಿ ಕಿರಿಚುತ್ತಾ, ಬೈಯ್ಯುತ್ತಾ, ಜಮ್ರಃದ ಸ್ಥಂಭಕ್ಕೆ ಚಪ್ಪಲಿಯಿಂದ ಮತ್ತು ದೊಡ್ಡ ದೊಡ್ಡ ಕಲ್ಲುಗಳಿಂದ ಹೊಡೆಯುತ್ತಾ ಎಸೆಯುತ್ತಾರೆ. ಇದು ಅಜ್ಞಾನವಾಗಿದೆ. ಬದಲಾಗಿ ಜಮ್ರಃಗಳಿಗೆ ಕಲ್ಲೆಸೆಯುವುದನ್ನು ಧರ್ಮದಲ್ಲಿ ಸೇರಿಸಿದ್ದು ಅಲ್ಲಾಹನ ಸ್ಮರಣೆಯನ್ನು ನೆಲೆನಿಲ್ಲಿಸುವುದಕ್ಕಾಗಿ. ಕಲ್ಲುಗಳು ಚಿಕ್ಕ ಹರಳು ಕಲ್ಲುಗಳಾಗಿರುವುದು ಉತ್ತಮ.

4. ಕೆಲವು ಹಾಜಿಗಳು ಪ್ರಯಾಸ ಮತ್ತು ಜನಸಂದಣಿಯನ್ನು ಭಯಪಟ್ಟು ತಮ್ಮ ಪರವಾಗಿ ಕಲ್ಲೆಸೆಯಲು ಬೇರೆಯವರನ್ನು ನೇಮಿಸುತ್ತಾರೆ. ಆದರೆ ವಾಸ್ತವವಾಗಿ, ರೋಗ ಮೊದಲಾದ ಅಸಾಮರ್ಥ್ಯದ ನಿಮಿತ್ತವಲ್ಲದೆ ಕಡ್ಡಾಯಕರ್ಮವನ್ನು ಇನ್ನೊಬ್ಬರಿಗೆ ವಹಿಸಿಕೊಡುವುದಕ್ಕೆ ಅನುಮತಿಯಿಲ್ಲ.

5. ಕೆಲವು ಹಾಜಿಗಳು ಕಲ್ಲೆಸೆಯುವ ಸಮಯವಲ್ಲದ ಸಮಯದಲ್ಲಿ ಕಲ್ಲೆಸೆಯುತ್ತಾರೆ. ಉದಾ: ಈದ್ ದಿನದ ಮಧ್ಯರಾತ್ರಿಗೆ ಮೊದಲೇ ಜಮ್ರತುಲ್ ಅಕಬಾಕ್ಕೆ ಕಲ್ಲೆಸೆಯುವುದು, ಅಯ್ಯಾಮು ತ್ತಶ್ರೀಕಿನ ದಿನಗಳಲ್ಲಿ ಮಧ್ಯಾಹ್ನಕ್ಕೆ ಮೊದಲು ಮೂರು ಜಮ್ರಃಗಳಿಗೆ ಕಲ್ಲೆಸೆಯುವುದು ಇತ್ಯಾದಿ. ಹೀಗೆ ಕಲ್ಲೆಸೆದರೆ ಅದು ಸಿಂಧುವಾಗುವುದಿಲ್ಲ. ಯಾಕೆಂದರೆ ಅದು ಕಲ್ಲೆಸೆಯುವ ಸಮಯವಲ್ಲ. ಹೀಗೆ ಕಲ್ಲೆಸೆದವರು ಪುನಃ ಕಲ್ಲೆಸೆಯಬೇಕು.

6. ಕೆಲವು ಹಾಜಿಗಳು ಜಮ್ರಃಗಳಿಗೆ ಕಲ್ಲೆಸೆಯುವುದರಲ್ಲಿರುವ ಕ್ರಮೀಕರಣವನ್ನು ತೊರೆದು, ಮೊದಲು ದೊಡ್ಡ ಜಮ್ರಃಕ್ಕೆ ನಂತರ ಮಧ್ಯದ ಜಮ್ರಃಕ್ಕೆ, ಕೊನೆಗೆ ಚಿಕ್ಕ ಜಮ್ರಃಕ್ಕೆ ಕಲ್ಲೆಸೆಯುತ್ತಾರೆ. ಆದರೆ ಕಡ್ಡಾಯವಾಗಿರುವುದು ಮೊದಲು ಚಿಕ್ಕ ಜಮ್ರಃಕ್ಕೆ ಕಲ್ಲೆಸೆಯುವುದು, ನಂತರ ಮಧ್ಯದ ಜಮ್ರಃಕ್ಕೆ, ನಂತರ ದೊಡ್ಡ ಜಮ್ರಃಕ್ಕೆ (ಮಕ್ಕಾಗೆ ಸಮೀಪವಿರುವ ಜಮ್ರತುಲ್ ಅಕಬಃಕ್ಕೆ) ಕಲ್ಲೆಸೆಯುವುದಾಗಿದೆ.

7. ಕೆಲವು ಹಾಜಿಗಳು ಜಮ್ರಃಗಳಿಗೆ ಕಲ್ಲೆಸೆಯುವ ಸಂದರ್ಭ, ಕಲ್ಲು ಜಮ್ರಃದೊಳಗೆ ಬಿದ್ದಿದೆಯೋ ಎಂದು ಖಾತ್ರಿಪಡಿಸುವುದಿಲ್ಲ. ಸ್ಥಂಭಕ್ಕೆ ಎಸೆದ ಕಲ್ಲು ಜಮ್ರಃದೊಳಗೆ ಬೀಳದಿದ್ದರೆ ಕಲ್ಲೆಸೆತವು ಸಿಂಧುವಾಗುವುದಿಲ್ಲ.

8. ಕೆಲವು ಹಾಜಿಗಳು ಅಯ್ಯಾಮು ತ್ತಶ್ರೀಕಿನ ಕೊನೆಯ ದಿನದ ಕಲ್ಲೆಸೆತವನ್ನು ಮೊದಲ ದಿನದ ಕಲ್ಲೆಸೆತದೊಂದಿಗೆ ಎಸೆದು, ಹಜ್ಜನ್ನು ಪೂರ್ತಿಗೊಳಿಸುವುದಕ್ಕೆ ಮೊದಲೇ ಊರಿಗೆ ಮರಳುತ್ತಾರೆ. ಕೆಲವೊಮ್ಮೆ ತಮ್ಮ ಪರವಾಗಿ ಎಸೆಯಲು ಬೇರೆಯವರಿಗೆ ವಹಿಸಿಕೊಟ್ಟು ಊರಿಗೆ ತೆರಳುತ್ತಾರೆ. ಇದು ಹಜ್ಜ್ ಕರ್ಮಗಳೊಂದಿಗೆ ಆಟವಾಡುವುದಾಗಿದೆ. ಆತುರದಿಂದ ಊರಿಗೆ ಮರಳುವಂತೆ ಶೈತಾನನು ನೀಡುವ ಪ್ರೇರಣೆಯ ಕಾರಣ ಅನೇಕ ಹಾಜಿಗಳಿಗೆ ಹಜ್ಜ್‌ನ ಕಡ್ಡಾಯ ಕರ್ಮಗಳಾದ ಜಮ್ರಃಗಳಿಗೆ ಕಲ್ಲೆಸೆಯುವುದು, ಅಯ್ಯಾಮು ತ್ತಶ್ರೀಕ್‌ನ ದಿನಗಳಲ್ಲಿ ಮಿನಾದಲ್ಲಿ ರಾತ್ರಿ ತಂಗುವುದು ಮೊದಲಾದ ಕರ್ಮಗಳು ನಷ್ಟವಾಗುತ್ತವೆ.

**ಏಳು: ಮಿನಾಗೆ ಸಂಬಂಧಿಸಿದ ತಪ್ಪುಗಳು:**

1. ಕೆಲವು ಹಾಜಿಗಳು ಜಮ್ರಃಗಳಿಗೆ ಕಲ್ಲೆಸೆಯುವುದಕ್ಕೆ ಮೊದಲೇ ಮಿನಾದಿಂದ ಕಅ್‌ಬಾಲಯಕ್ಕೆ ತೆರಳಿ ವಿದಾಯದ ತವಾಫ್ ನಿರ್ವಹಿಸುತ್ತಾರೆ. ನಂತರ ಮಿನಾಗೆ ಬಂದು ಜಮ್ರಃಗಳಿಗೆ ಕಲ್ಲೆಸೆದು ಅಲ್ಲಿಂದಲೇ ಊರಿಗೆ ಮರಳುತ್ತಾರೆ. ಹೀಗೆ ಅವರು ಮಾಡುವ ಕೊನೆಯ ಹಜ್ಜ್ ಕರ್ಮವು ಜಮ್ರಃಕ್ಕೆ ಕಲ್ಲೆಸೆಯುವುದಾಗಿರುತ್ತದೆ. ಆದರೆ ಕಡ್ಡಾಯವಾಗಿರುವುದು, ವಿದಾಯದ ತವಾಫನ್ನು ಜಮ್ರಃಕ್ಕೆ ಕಲ್ಲೆಸೆದ ಬಳಿಕ ನಿರ್ವಹಿಸುವುದು. ಅಂದರೆ ವಿದಾಯದ ತವಾಫ್ ಹಜ್ಜ್ ಕರ್ಮದ ಕೊನೆಯ ಕರ್ಮವಾಗಿರಬೇಕು.

2. ಎರಡು ದಿನಗಳಲ್ಲಿ ಆತುರಪಟ್ಟು ಮಿನಾ ಬಿಟ್ಟು ತೆರಳುವುದನ್ನು ಕೆಲವರು ತಪ್ಪಾಗಿ ಗ್ರಹಿಸಿ, ಆ ಎರಡು ದಿನಗಳು ಈದ್‌ನ ದಿನ ಮತ್ತು

ಅದರ ನಂತರದ ದಿನವೆಂದು ಭಾವಿಸುತ್ತಾರೆ. ಆದರೆ ವಾಸ್ತವವಾಗಿ ಈ ಎರಡು ದಿನಗಳು ದುಲ್‌ಹಿಜ್ಜಃ ಹನ್ನೊಂದನೇ ಮತ್ತು ಹನ್ನೆರಡನೇ ದಿನಗಳಾಗಿವೆ. ಆದ್ದರಿಂದ ಯಾರಾದರೂ ಹನ್ನೆರಡನೇ ದಿನದಂದು ಮಧ್ಯಾಹ್ನದ ಬಳಿಕ ಜಮ್ರಃಕ್ಕೆ ಕಲ್ಲೆಸೆದ ನಂತರ ಆತುರಪಟ್ಟು ಮಿನಾ ಬಿಟ್ಟರೆ ಅವರ ಮೇಲೆ ದೋಷವಿಲ್ಲ. ಇನ್ನು ಯಾರಾದರೂ ದುಲ್‌ಹಿಜ್ಜಃ ಹದಿಮೂರನೇ ದಿನವೂ ಮಿನಾದಲ್ಲಿ ಉಳಿದು ಮಧ್ಯಾಹ್ನದ ಬಳಿಕ ಕಲ್ಲೆಸೆದ ನಂತರ ಮಿನಾ ಬಿಟ್ಟರೆ ಅವರ ಮೇಲೂ ದೋಷವಿಲ್ಲ. ಇದು ಅತ್ಯುತ್ತಮ ವಿಧಾನವಾಗಿದೆ.

**ಎಂಟು: ಅಲ್‌ಮಸ್ಜಿದುಲ್ ಹರಾಮ್‌ನಿಂದ ಹೊರಡುವುದಕ್ಕೆ ಸಂಬಂಧಿಸಿದ ತಪ್ಪುಗಳು:**

ಕೆಲವು ಹಾಜಿಗಳು ವಿದಾಯದ ತವಾಫ್ ನಿರ್ವಹಿಸಿ ಅಲ್‌ಮಸ್ಜಿದುಲ್ ಹರಾಮ್‌ನಿಂದ ನಿರ್ಗಮಿಸುವಾಗ ಹಿಂದಕ್ಕೆ ಹೆಜ್ಜೆಯಿ ಡುತ್ತಾ ಹೊರಬರುತ್ತಾರೆ. ಹೀಗೆ ಮಾಡುವುದು ಧರ್ಮದಲ್ಲಿದೆಯೆಂದು ಮತ್ತು ಇದೊಂದು ಮರ್ಯಾದೆಯೆಂದು ಅವರು ನಂಬುತ್ತಾರೆ. ಆದರೆ ವಾಸ್ತವವಾಗಿ ಇದೊಂದು ಬಿದ್‌ಅತ್. ಹೆಚ್ಚು ಬಲ್ಲವನು ಅಲ್ಲಾಹು.

## ಪ್ರವಾದಿ(ﷺ)ರವರ ಮಸೀದಿಯನ್ನು ಸಂದರ್ಶಿಸುವವರಿಗೆ ಕೆಲವು ನಿರ್ದೇಶನಗಳು

1. ಪ್ರವಾದಿ(ﷺ)ರವರ ಮಸೀದಿಯನ್ನು ಸಂದರ್ಶಿಸುವುದು ಮತ್ತು ಅಲ್ಲಿ ಐದು ವೇಳೆಯ ನಮಾಝ್ ನಿರ್ವಹಿಸುವುದು ಸುನ್ನತ್. ಅದು ಹಜ್ಜ್ ನಿರ್ವಹಿಸುವುದಕ್ಕೆ ಮುಂಚೆಯೋ, ನಂತರವೋ ಆಗಿದ್ದರೂ ಸರಿ. ಅಲ್ಲಿ

ದಿಕ್ರ್, ದುಆ ಮತ್ತು ಸುನ್ನತ್ ನಮಾಝ್‌ಗಳನ್ನು ಹೆಚ್ಚಿಸಬೇಕು. ಯಾಕೆಂದರೆ ಅಲ್ಲಿ ನಿರ್ವಹಿಸುವ ಒಂದು ನಮಾಝ್ ಅಲ್‌ಮಸ್ಜಿದುಲ್ ಹರಾಮ್ ಬಿಟ್ಟು ಇತರ ಮಸೀದಿಗಳಲ್ಲಿ ನಿರ್ವಹಿಸುವ ಸಾವಿರ ನಮಾಝ್‌ಗಿಂತಲೂ ಉತ್ತಮವಾಗಿದೆ.

2. ಅಲ್‌ಮಸ್ಜಿದು ನ್ನಬವೀ (ಪ್ರವಾದಿ(ﷺ)ರವರ ಮಸೀದಿ)ಯನ್ನು ಸಂದರ್ಶಿಸುವವರು ಮೊಟ್ಟಮೊದಲು ಎರಡು ರಕ್‌ಅತ್ ತಹಿಯ್ಯತ್ ನಮಾಝ್ ನಿರ್ವಹಿಸಬೇಕು. ಈ ಎರಡು ರಕ್‌ಅತ್ ತಹಿಯ್ಯತ್ ನಮಾಝ್ ರೌದಃದಲ್ಲಿ (ಪ್ರವಾದಿ(ﷺ)ರವರ ಗೋರಿ ಮತ್ತು ಮಿಂಬರಿನ ನಡುವೆಯಿರುವ ಸ್ಥಳ) ನಿರ್ವಹಿಸುವುದು ಅತ್ಯುತ್ತಮ. ಯಾಕೆಂದರೆ ಈ ಸ್ಥಳಕ್ಕೆ ವಿಶೇಷ ಶ್ರೇಷ್ಠತೆಯಿದೆ. ಈ ನಮಾಝನ್ನು ಮಸೀದಿಯ ಯಾವುದೇ ಭಾಗದಲ್ಲೂ ನಿರ್ವಹಿಸಿದಲೂ ತೊಂದರೆಯಿಲ್ಲ. ಯಾಕೆಂದರೆ ಮಸೀದಿ ಪೂರ್ತಿ ಪುಣ್ಯವಿರುವ ಸ್ಥಳವಾಗಿದೆ.

3. ನಂತರ ಪ್ರವಾದಿ(ﷺ)ರವರ ಗೋರಿಯನ್ನು ಸಂದರ್ಶಿಸಿ, ಅವರಿಗೆ ಮತ್ತು ಅವರ ಇಬ್ಬರು ಸಂಗಡಿಗರಿಗೆ ಸಲಾಂ ಹೇಳಬೇಕು. ಸಲಾಂ ಹೇಳುವುದು ಪೂರ್ಣ ಮರ್ಯಾದೆಯೊಂದಿಗೆ ಮೆತ್ತಗಿನ ಸ್ವರದಲ್ಲಾಗಿರಬೇಕು. ಪ್ರವಾದಿ(ﷺ)ರವರ ಗೋರಿಯ ಬಗ್ಗೆ ಗಟ್ಟಿ ಸ್ವರದಲ್ಲಿ ಮಾತನಾಡುವುದಕ್ಕೆ ಅನುಮತಿಯಿಲ್ಲ. ಯಾಕೆಂದರೆ ಜೀವಂತ ಸ್ಥಿತಿಯಲ್ಲೂ ಮರಣಾನಂತರವೂ ಅವರನ್ನು ಗೌರವಿಸಬೇಕಾದುದು ಕಡ್ಡಾಯ.

4. ಕುಬಾ ಮಸೀದಿಗೆ ತೆರಳಿ ಅಲ್ಲಿ ನಮಾಝ್ ನಿರ್ವಹಿಸುವುದು ಸುನ್ನತ್ತಾಗಿದೆ. ಯಾಕೆಂದರೆ ಅದಕ್ಕೆ ಶ್ರೇಷ್ಠತೆಯಿದೆ.

5. ಬಕೀಅ್ ಮಕ್ಬರ ಮತ್ತು ಉಹುದ್ ಶುಹದಾಗಳ ಗೋರಿಗಳನ್ನು ಹಾಗೂ ಇತರ ಸಹಾಬಾಗಳ ಗೋರಿಗಳನ್ನು ಸಂದರ್ಶಿಸುವುದು ಮತ್ತು

ಅವರಿಗೋಸ್ಕರ ಪ್ರಾರ್ಥಿಸುವುದು ಸುನ್ನತ್ತಾಗಿದೆ. ಯಾಕೆಂದರೆ ಪ್ರವಾದಿ(ﷺ)ರವರು ಆ ಗೋರಿಗಳನ್ನು ಸಂದರ್ಶಿಸಿ ಅವರಿಗೋಸ್ಕರ ಪ್ರಾರ್ಥಿಸುತ್ತಿದ್ದರು.

6. ಅಲ್‌ಮಸ್ಜಿದು ನ್ನಬವೀಯನ್ನು ಸಂದರ್ಶಿಸುವಾಗ ಇಹ್ರಾಮ್ ಮಾಡುವುದಾಗಲಿ, ತಲ್ಬಿಯತ್ ಉಚ್ಚರಿಸುವುದಾಗಲಿ, ವಿಶೇಷ ಬಟ್ಟೆ ಧರಿಸುವುದಾಗಲಿ, ವಿದಾಯ ಕೋರುವುದಾಗಲಿ ಇಲ್ಲ. ಇವೆಲ್ಲವೂ ಅಲ್‌ಮಸ್ಜಿದುಲ್ ಹರಾಮ್‌ಗೆ ಇರುವ ವಿಶೇಷತೆಗಳಾಗಿವೆ.

7. ಪ್ರವಾದಿ(ﷺ)ರೊಂದಿಗಾಗಲಿ, ಅಥವಾ ಇತರ ಮೃತರೊಂದಿಗಾಗಲಿ, ಅಥವಾ ಅನುಪಸ್ಥಿತಿಯಲ್ಲಿರುವವರೊಂದಿಗಾಗಲಿ ಅಗತ್ಯವನ್ನು ಪೂರೈಸಿಕೊಡಲು, ಕಷ್ಟವನ್ನು ನಿವಾರಿಸಲು, ಅಥವಾ ರೋಗವನ್ನು ವಾಸಿ ಮಾಡಲು ಮೊದಲಾದ ಅಲ್ಲಾಹನಿಗೆ ಮಾತ್ರ ಮಾಡಲು ಸಾಧ್ಯವಿರುವ ವಿಷಯಗಳನ್ನು ಬೇಡುವುದಕ್ಕೆ ಅನುಮತಿಯಿಲ್ಲ. ಯಾಕೆಂದರೆ ಅದು ಶಿರ್ಕ್.

8. ಪ್ರವಾದಿ(ﷺ)ರವರ ಗೋರಿಯನ್ನು ಸಂದರ್ಶಿಸುವುದು ಹಾಗೂ ಸಹಾಬಾಗಳ ಮತ್ತು ಶುಹದಾಗಳ ಗೋರಿಗಳನ್ನು ಸಂದರ್ಶಿಸುವುದು, ಪ್ರವಾದಿ(ﷺ)ರವರ ಮಸೀದಿ ಸಂದರ್ಶನದ ನಂತರ ನಿರ್ವಹಿಸಬೇಕಾದ, ಅದರೊಂದಿಗೆ ಅನುಬಂಧಿತವಾಗಿರುವ ವಿಷಯಗಳಾಗಿವೆ. ಯಾಕೆಂದರೆ ಯಾತ್ರೆ ಕೈಗೊಳ್ಳಬೇಕಾದುದು ಪ್ರವಾದಿ(ﷺ)ರವರ ಮಸೀದಿ ಸಂದರ್ಶನ ಮಾಡುವುದಕ್ಕೆ ಮಾತ್ರ.

9. ಅಲ್‌ಮಸ್ಜಿದು ನ್ನಬವೀಯ ಸಂದರ್ಶನವು ಹಜ್ಜ್ ಕರ್ಮಗಳೊಂದಿಗೆ ಯಾವುದೇ ಸಂಬಂಧವನ್ನೂ ಹೊಂದಿಲ್ಲ. ಅದು ಹಜ್ಜ್ ಕರ್ಮದ ಪೂರ್ತೀಕರಣದಲ್ಲಿ ಒಳಪಟ್ಟದ್ದೂ ಅಲ್ಲ. ಅಲ್‌ಮಸ್ಜಿದು

ನ್ನಬವೀಯ ಸಂದರ್ಶನಕ್ಕೆ ನಿರ್ದಿಷ್ಠ ಸಮಯವೆಂಬುದಿಲ್ಲ. ವರ್ಷದ ಯಾವುದೇ ಸಮಯದಲ್ಲೂ ಸಂದರ್ಶಿಸಬಹುದು.

10. ಅಲ್‌ಮಸ್ಜಿದು ನ್ನಬವೀಯಲ್ಲಿ ಸಂದರ್ಶಕರು ಇಂತಿಷ್ಟು ರಕ್‌ಅತ್ ನಮಾಝ್ ನಿರ್ವಹಿಸಬೇಕೆಂಬ ನಿಯಮವಿಲ್ಲ.

11. ಪ್ರವಾದಿ(ﷺ)ರವರ ಮಸೀದಿಯಲ್ಲಿ ಪ್ರಾರ್ಥಿಸಬೇಕೆಂದು ಉದ್ದೇಶಿಸುವವರು ಕಿಬ್ಲಃದೆಡೆಗೆ ತಿರುಗಿ ಪ್ರಾರ್ಥಿಸಬೇಕು. ಪ್ರವಾದಿ(ﷺ)ರವರ ಗೋರಿಯ ಕಡೆಗೆ ತಿರುಗಿ ಪ್ರಾರ್ಥಿಸುವುದಕ್ಕೆ ಅನುಮತಿಯಿಲ್ಲ.

12. ಪ್ರವಾದಿ(ﷺ)ರವರ ಗೋರಿಯ ಆವರಣವನ್ನು ಸವರುವುದಕ್ಕಾಗಲಿ, ಚುಂಬಿಸುವುದಕ್ಕಾಗಲಿ, ಅಥವಾ ಅದಕ್ಕೆ ತವಾಫ್ ಮಾಡುವುದಕ್ಕಾಗಲಿ ಅನುಮತಿಯಿಲ್ಲ. ಯಾಕೆಂದರೆ ಇವೆಲ್ಲವೂ ನಿಷಿದ್ಧ ಬಿದ್‌ಅತ್‌ಗಳು.

13. ಪ್ರವಾದಿ(ﷺ)ರವರ ಗೋರಿಯನ್ನು ಸಂದರ್ಶಿಸುವ ವ್ಯಕ್ತಿ ಗೋರಿಗೆ ಮುಖಮಾಡಿ ನಿಂತು ಪೂರ್ಣ ಮರ್ಯಾದೆಯೊಂದಿಗೆ ಮೆತ್ತಗಿನ ಸ್ವರದಲ್ಲಿ ಹೀಗೆ ಹೇಳುವುದು ಸುನ್ನತ್ತಾಗಿದೆ:

السَّلَامُ عَلَيْكَ أَيُّهَا النَّبِيُّ وَرَحْمَةُ اللَّهِ وَبَرَكَاتُهُ

"ಅಸ್ಸಲಾಮು ಅಲೈಕ ಅಯ್ಯುಹನ್ನಬಿಯ್ಯು ವರಹ್ಮತುಲ್ಲಾಹಿ ವಬರಕಾತುಹು."

ನಂತರ ಪ್ರವಾದಿ(ﷺ)ರವರ ಮೇಲೆ ಸಲಾತ್ ಹೇಳಿ ಅವರಿಗೋಸ್ಕರ ಪ್ರಾರ್ಥಿಸಬೇಕು.

ಸಂದರ್ಶಕರು ಹೀಗೆ ಹೇಳುವುದರಲ್ಲಿ ಯಾವುದೇ ತೊಂದರೆಯಿಲ್ಲ:

السَّلَامُ عَلَيْكَ يَا نَبِيَّ اللَّهِ، السَّلَامُ عَلَيْكَ يَا خِيرَةَ اللَّهِ مِنْ خَلْقِهِ، السَّلَامُ عَلَيْكَ يَا سَيِّدَ الْمُرْسَلِينَ وَإِمَامَ الْمُتَّقِينَ، أَشْهَدُ أَنَّكَ قَدْ بَلَّغْتَ الرِّسَالَةَ وَأَدَّيْتَ الْأَمَانَةَ وَنَصَحْتَ الْأُمَّةَ وَجَاهَدْتَ فِي اللَّهِ حَقَّ جِهَادِهِ.

"ಅಸ್ಸಲಾಮು ಅಲೈಕ ಯಾ ನಬಿಯ್ಯಲ್ಲಾಹ್, ಅಸ್ಸಲಾಮು ಅಲೈಕ ಯಾ ಖೀರತಲ್ಲಾಹಿ ಮಿನ್ ಖಲ್ಕಿಹೀ, ಅಸ್ಸಲಾಮು ಅಲೈಕ ಯಾ ಸಯ್ಯಿದಲ್ ಮುರ್ಸಲೀನ ವಇಮಾಮಲ್ ಮುತ್ತಕೀನ್, ಅಶ್‌ಹದು ಅನ್ನಕ ಕದ್ ಬಲ್ಲಗ್ತ್ರಿಸಾಲತ, ವಅದ್ದೈತಲ್ ಅಮಾನತ, ವನಸಹ್ತಲ್ ಉಮ್ಮತ, ವಜಾಹದ್ತ ಫಿಲ್ಲಾಹಿ ಹಕ್ಕ ಜಿಹಾದಿಹೀ."

ಯಾಕೆಂದರೆ ಇವೆಲ್ಲವೂ ಪ್ರವಾದಿ(ﷺ)ರವರ ಗುಣಗಳಾಗಿವೆ. ಇದರ ನಂತರ ಅಬೂ ಬಕ್ರ್(ರಿ) ಮತ್ತು ಉಮರ್(ರಿ)ರವರಿಗೆ ಸಲಾಮ್ ಹೇಳಿ ಅವರಿಗೋಸ್ಕರ ಪ್ರಾರ್ಥಿಸಬೇಕು. ಅವರ ಬಗ್ಗೆ ತೃಪ್ತಿಪಡುವಂತೆ ಅಲ್ಲಾಹನಲ್ಲಿ ಬೇಡಬೇಕು.

14. ಮದೀನಾ ಮುನವ್ವರದಲ್ಲಿ ಪ್ರವಾದಿ(ﷺ)ರವರ ಮಸೀದಿ ಮತ್ತು ಕುಬಾ ಮಸೀದಿಯ ಹೊರತು ಸಂದರ್ಶಿಸಿ ನಮಾಝ್ ನಿರ್ವಹಿಸಬೇಕಾದ ಬೇರೆ ಮಸೀದಿಗಳಿಲ್ಲ. ಯಾಕೆಂದರೆ ಈ ಎರಡು ಮಸೀದಿಗಳ ಹೊರತು ಅಲ್ಲಿರುವ ಇತರ ಮಸೀದಿಗಳೆಲ್ಲವೂ ಪುಣ್ಯದಲ್ಲಿ ಬೇರೆಲ್ಲ ಮಸೀದಿಗಳಂತೆಯೇ ಆಗಿದೆ. ಆದ್ದರಿಂದ ಅವುಗಳನ್ನು ಸಂದರ್ಶಿಸಲು ಶರೀಅತ್ ನಿರ್ದೇಶಿಸಿಲ್ಲ.

وَصَلَّى اللهُ وَسَلَّمَ عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِينَ.

*********

# ಒಳಪುಟಗಳಲ್ಲಿ


| م | العنوان | الصفحة |
|---|---|---|
| 1 | ಪ್ರಸ್ತಾವನೆ | **1** |
| 2 | ಹಜ್ಜ್ ಮತ್ತು ಉಮ್ರ಼ದ ಶ್ರೇಷ್ಠತೆಗಳು | **3** |
| 3 | ಮೀಕಾತ್‌ಗಳು | **7** |
| 4 | ಹಜ್ಜ್ ಕರ್ಮದ ವಿಧಗಳು | **10** |
| 5 | ಹಜ್ಜ್‌ನ ರುಕ್ನ್‌ಗಳು (ಸ್ಥಂಭಗಳು) | **12** |
| 6 | ಹಜ್ಜ್‌ನ ವಾಜಿಬ್‌ಗಳು (ಕಡ್ಡಾಯಗಳು) | **13** |
| 7 | ಉಮ್ರ಼ದ ರುಕ್ನ್‌ಗಳು (ಸ್ಥಂಭಗಳು) | **14** |
| 8 | ಉಮ್ರ಼ದ ವಾಜಿಬ್‌ಗಳು (ಕಡ್ಡಾಯಗಳು) | **14** |
| 9 | ಇಹ್ರಾಮ್‌ನ ನಿಷಿದ್ಧಗಳು | **14** |
| 10 | ಈ ನಿಷಿದ್ಧಗಳಲ್ಲಿ ಯಾವುದಾದರೊಂದನ್ನು ಮಾಡುವವನ ವಿಧಿ | **17** |
| 11 | ಫಿದ್ಯಃ (ಪ್ರಾಯಶ್ಚಿತ್ತ) | **17** |
| 12 | ಇಹ್ರಾಮ್ ಮಾಡುವುದು ಹೇಗೆ? | **21** |
| 13 | ಉಮ್ರಃ ಮಾಡುವುದು ಹೇಗೆ? | **24** |
| 14 | ಹಜ್ಜ್ ನಿರ್ವಹಿಸುವುದು ಹೇಗೆ? | **30** |
| 15 | ಹಜ್ಜ್ ಮತ್ತು ಉಮ್ರಃ ನಿರ್ವಹಿಸುವವರಿಗೆ ಕೆಲವು ನಿರ್ದೇಶನಗಳು | **35** |
| 16 | ಎಚ್ಚರವಹಿಸಬೇಕಾದ ಕೆಲವು ವಿಷಯಗಳು | **43** |
| 17 | ಪ್ರವಾದಿ(ﷺ)ರವರ ಮಸೀದಿಯನ್ನು ಸಂದರ್ಶಿಸುವವರಿಗೆ ಕೆಲವು ನಿರ್ದೇಶನಗಳು | **56** |

IslamHouse.com